# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ನವೆಂಬರ್ 12, 2020

ಸಂಪುಟ : 47 ಸಂಚಿಕೆ : 193 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




**ಭತ್ತದ ಕಟಾವು** ಜಿಲ್ಲಾದ್ಯಂತ ಮುಂಗಾರು ಹಂಗಾಮಿನಲ್ಲಿ ಬೆಳೆದ ಭತ್ತದ ಬೆಳೆ ಕಟಾವು ಕಾರ್ಯ ಚುರುಕುಗೊಂಡಿದೆ. ಶಾಮನೂರು ಬೈಪಾಸ್ ಬಳಿಯ ಜಮೀನೊಂದರಲ್ಲಿ ಯಂತ್ರದ ಮೂಲಕ ಭತ್ತದ ಪೈರು ಕಟಾವು ನಡೆಯುತ್ತಿರುವುದು.

### ನ.18ರಂದು ಸಂಪುಟ ವಿಸ್ತರಣೆಗೆ ಸಿಎಂ ಸಿದ್ಧತೆ

# ಆರು ಜನರಿಗೆ ಸಚಿವ ಸ್ಥಾನ ಸಾಧ್ಯತೆ

ಬೆಂಗಳೂರು, ನ. 11 - ದೀಪಾವಳಿ ಕಳೆಯುತ್ತಿದ್ದಂತೆ ತಮ್ಮ ಮಂತ್ರಿಮಂಡಲವನ್ನು ವಿಸ್ತರಿಸಿ ಹೊಸದಾಗಿ ಆರು ಮಂದಿಯನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿರ್ಧರಿಸಿದ್ದಾರೆ.

ಒಂದು ವೇಳೆ ಪಕ್ಷದ ವರಿಷ್ಠರ ಅನುಮತಿ ದೊರೆತರೆ ನವೆಂಬರ್ 16ರ ದೀಪಾವಳಿ ದಿನದಂದು ಇಲ್ಲವೇ 18ರಂದು ಸಂಪುಟ ವಿಸ್ತರಣೆ ಮಾಡಲು ತೀರ್ಮಾನಿಸಿದ್ದಾರೆ.

ಪಕ್ಷವನ್ನು ಅಧಿಕಾರಕ್ಕೆ ತರಲು ಕಾರಣರಾದ ವಲಸಿಗ ಶಾಸಕರಿಗೆ ತಮ್ಮನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರೇ ಸಂಪುಟ ವಿಸ್ತರಣೆ ದಿನಾಂಕವನ್ನು ಹೇಳಿದ್ದಾರೆ.

ಆಡಳಿತ ದೃಷ್ಟಿಯಿಂದ ಸಂಪುಟ ಪುನರ್ ರಚನೆ ಮಾಡಬೇಕೆಂದಿದ್ದೇನೆ, ಇದಕ್ಕೆ ವರಿಷ್ಠರ ಅನುಮತಿ ಅಗತ್ಯವಿದೆ, ಅನುಮತಿ ದೊರೆತ ನಂತರ ರಾಜ್ಯದ ಮುಖಂಡರೊಂದಿಗೆ ಚರ್ಚಿಸಿ, ಕೆಲವರನ್ನು

**ಕಾಂಗ್ರೆಸ್‌ನಿಂದ ಬಂದಿರುವ ಎಂಟಿಬಿ ನಾಗರಾಜ್, ಆರ್. ಶಂಕರ್, ಮುನಿರತ್ನ ನಾಯ್ಡು, ಪಕ್ಷದ ಹಿರಿಯ ಶಾಸಕ ಉಮೇಶ್ ಕತ್ತಿ, ಸಿ.ಪಿ. ಯೋಗೇಶ್ವರ್ ಅಲ್ಲದೆ, ಕರಾವಳಿ ತೀರದ ಒಬ್ಬರನ್ನು ಸಂಪುಟಕ್ಕೆ ತೆಗೆದು ಕೊಳ್ಳುವುದಾಗಿ ಮುಖ್ಯಮಂತ್ರಿ ಹೇಳಿ ರುವುದಾಗಿ ಮೂಲಗಳು ತಿಳಿಸಿವೆ.**

ಸಂಪುಟದಿಂದ ಕೈಬಿಟ್ಟು ಪಕ್ಷದ ಮೂಲ ಶಾಸಕರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಮಾಡಿಕೊಡಬೇಕೆಂದಿದ್ದೇನೆ.

ಆದರೆ, ಇದು ಒಂದು ದೊಡ್ಡ ಕಸರತ್ತಾಗುತ್ತದೆ, ವರಿಷ್ಠರು ಅನುಮತಿ ನೀಡಿದರೆ ಇದನ್ನೂ ಮಾಡಿಯೇ ಬಿಡುತ್ತೇನೆ. ಇಲ್ಲದಿದ್ದರೆ, ಪಕ್ಷವನ್ನು ಅಧಿಕಾರಕ್ಕೆ ತರಲು ಕಾರಣರಾದವರಿಗೆ ಈ ಹಿಂದೆ ನೀಡಿದ ಭರವಸೆಯಂತೆ ಅವರುಗಳನ್ನು ಮೊದಲು ಮಂತ್ರಿ ಮಾಡುತ್ತೇನೆ ಎಂದಿದ್ದಾರೆ.

ಉಪಚುನಾವಣೆಯಲ್ಲಿ ಪಕ್ಷ ಎರಡು ಸ್ಥಾನಗಳಲ್ಲದೆ, ಪರಿಷತ್ತಿನ ನಾಲ್ಕು ಕ್ಷೇತ್ರಗಳಲ್ಲೂ ಜಯಭೇರಿ ಭಾರಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಮಂತ್ರಿಮಂಡಲ ಪುನರ್ ರಚನೆ ಮಾಡುವುದಾಗಿ ಹೇಳಿದ್ದರು.

ವಿಸ್ತರಣೆ ಮಾಡುವ ಉದ್ದೇಶದಿಂದ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಸಂಪರ್ಕಿಸಿರುವ ಮುಖ್ಯಮಂತ್ರಿ ಅವರು, ಭೇಟಿಗೆ ಅವಕಾಶ ನೀಡುವಂತೆ ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಭೇಟಿಗೂ ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ.

ಒಂದು ವೇಳೆ ಸಾಧ್ಯವಾಗದಿದ್ದರೆ, ಸಂಪುಟ ವಿಸ್ತರಣೆಗೆ ಈ ನಾಯಕರೊಂದಿಗೆ (2ನೇ ಪುಟಕ್ಕೆ)

## ಡಿ.1ರಂದು ರಾಜ್ಯಸಭಾ ಸ್ಥಾನಕ್ಕೆ ಚುನಾವಣೆ

ಬೆಂಗಳೂರು, ನ. 11 - ಬಿಜೆಪಿಯ ಅಶೋಕ್ ಗಸ್ತಿ ಅವರ ನಿಧನದಿಂದ ತೆರವಾಗಿರುವ ರಾಜಸಭಾ ಸ್ಥಾನಕ್ಕೆ ಡಿಸೆಂಬರ್ 1 ರಂದು ಚುನಾವಣೆ ನಡೆಯಲಿದೆ.

ನಾಮಪತ್ರ ಸಲ್ಲಿಕೆಯು ಇಂದಿನಿಂದಲೇ ಆರಂಭವಾಗಿದ್ದು, ಸಲ್ಲಿಕೆಗೆ ನವೆಂಬರ್ 18 ಕೊನೆ ದಿನವಾಗಿರುತ್ತದೆ. ನವೆಂಬರ್ 23 ರಂದು ಉಮೇದುವಾರಿಕೆ ಹಿಂತೆಗೆಯಲು ಕೊನೆ ದಿನವಾಗಿರುತ್ತದೆ. ಮತದಾನ ಅವಶ್ಯವಿದ್ದಲ್ಲಿ, (4ನೇ ಪುಟಕ್ಕೆ)

## ಉತ್ಪಾದನಾ ಉತ್ತೇಜನಕ್ಕೆ 2 ಲಕ್ಷ ಕೋಟಿ ರೂ.

ನವದೆಹಲಿ, ನ. 11 - ಹತ್ತಕ್ಕೂ ಹೆಚ್ಚು ವಲಯಗಳಲ್ಲಿ ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಲು 2 ಲಕ್ಷ ಕೋಟಿ ರೂ.ಗಳ ಪ್ರಸ್ತಾಪಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಸಂಪುಟ ಸಭೆಯ ನಂತರ ಮಾತನಾಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಫಾರ್ಮಾ, ಉಕ್ಕು, ಆಟೋ, ಟೆಲಿಕಾಂ, ಜವಳಿ, (3ನೇ ಪುಟಕ್ಕೆ)

## 106 ದಿನಗಳ ನಂತರ ಸಕ್ರಿಯ ಸೋಂಕಿತರು 5 ಲಕ್ಷಕ್ಕೂ ಕಡಿಮೆ

ನವದೆಹಲಿ ನ. 11 - ದೇಶದಲ್ಲಿ 106 ದಿನಗಳ ನಂತರ ಸಕ್ರಿಯ ಸೋಂಕು ಪ್ರಕರಣಗಳ ಸಂಖ್ಯೆ 5 ಲಕ್ಷಕ್ಕೂ ಕಡಿಮೆಯಾಗಿದೆ. ಇದರಿಂದಾಗಿ ಕೊರೊನಾ ವಿರುದ್ಧದ ಹೋರಾಟದಲ್ಲಿ ಮತ್ತೊಂದು ಮೈಲಿಗಲ್ಲು ದಾಟಿದಂತಾಗಿದೆ.

44,281 ಕೊರೊನಾ ಸೋಂಕು ಪ್ರಕರಣಗಳು ಬುಧವಾರ ಪತ್ತೆಯಾಗಿವೆ. ದೆಹಲಿಯಲ್ಲಿ ಅತಿ ಹೆಚ್ಚಿನ 7,830 ಪ್ರಕರಣಗಳು (2ನೇ ಪುಟಕ್ಕೆ)

## ಅರ್ನಬ್ ಗೋಸ್ವಾಮಿಗೆ ಸುಪ್ರೀಂ ಜಾಮೀನು

ನವದೆಹಲಿ, ನ. 11 – ವ್ಯಕ್ತಿಯೋರ್ವ ಇನ್ನೋರ್ವ ವ್ಯಕ್ತಿಗೆ ಹಣ ನೀಡಿಲಿಲ್ಲ ಎಂಬುದನ್ನು ಆತ್ಮಹತ್ಯೆಗೆ ಪ್ರಚೋದನೆ ಎಂದು ಪರಿಗಣಿಸಲು ಸಾಧ್ಯವಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಪತ್ರಕರ್ತ ಅರ್ನಬ್ ಗೋಸ್ವಾಮಿಗೆ ಜಾಮೀನು ನೀಡಿದೆ.

**ವ್ಯಕ್ತಿಯೋರ್ವ ಇನ್ನೊಬ್ಬನಿಗೆ ಹಣ ನೀಡಲಿಲ್ಲ ಎಂಬುದನ್ನು ಆತ್ಮಹತ್ಯೆಗೆ ಪ್ರಚೋದನೆ ಎಂದು ಪರಿಗಣಿಸಲು ಆಗದು ಎಂದ ನ್ಯಾಯಾಲಯ**



ಅರ್ನಬ್ ಗೋಸ್ವಾಮಿ ಅವರು ಇಂಟೀರಿಯರ್ ಡಿಸೈನರ್‌ಗೆ ಹಣ ನೀಡಬೇಕಿತ್ತು. ಹಣ ನೀಡದ ಕಾರಣದಿಂದ ನಾಯಕ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆತ್ಮಹತ್ಯೆ ಪ್ರಚೋದನೆಯ ದೂರು ದಾಖಲಿಸಲಾಗಿತ್ತು.

ಅರ್ನಬ್ ಸೇರಿದಂತೆ ಮೂವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದ್ದು, ವೈಯಕ್ತಿಕ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕುವುದು ನ್ಯಾಯವನ್ನು ಅಣಕವಾಡಿದಂತೆ ಎಂದು ಹೇಳಿದೆ. ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ಇಂದಿರಾ ಬ್ಯಾನರ್ಜಿ ಅವರನ್ನು (2ನೇ ಪುಟಕ್ಕೆ)

## ಆಗ್ನೇಯ ಕ್ಷೇತ್ರದಲ್ಲೂ ಬಿಜೆಪಿ

ಬೆಂಗಳೂರು, ನ. 11 - ವಿಧಾನ ಪರಿಷತ್‌ನ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಚಿದಾನಂದ ಗೌಡ ಗೆಲುವು ಸಾಧಿಸಿದ್ದಾರೆ.

ಮಂಗಳವಾರದಿಂದ ಆರಂಭವಾದ ಮತ ಎಣಿಕೆಯಲ್ಲಿ ಚಿದಾನಂದ ಗೌಡ ಅವರು 24,217 ಮತಗಳನ್ನು ಪಡೆಯುವ ಮೂಲಕ ತಮ್ಮ ಪ್ರತಿಸ್ಪರ್ಧಿ ಪಕ್ಷೇತರ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ಅವರನ್ನು ಸೋಲಿಸಿದ್ದಾರೆ. ಬಿಜೆಪಿ ಟಿಕೆಟ್ ಸಿಗದ ಕಾರಣ ಶ್ರೀನಿವಾಸ್, ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಅ.28ರಂದು ಮತದಾನ ನಡೆದಿತ್ತು. ನವೆಂಬರ್ 2ರಂದೇ ನಡೆಯಬೇಕಿದ್ದ ಮತ ಎಣಿಕೆಯನ್ನು ನವೆಂಬರ್ 10ಕ್ಕೆ



ಚುನಾವಣಾ ಆಯೋಗ ಮುಂದೂಡಿತ್ತು.

ಮಂಗಳವಾರ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆಯು ತಡವಾಗಿ ಆರಂಭವಾದ ಕಾರಣ ಬುಧವಾರ ಬೆಳಿಗ್ಗೆ ಮತ್ತೆ ಮತ ಎಣಿಕೆ ಪ್ರಕ್ರಿಯೆಯನ್ನು ಮುಂದುವರೆಸಲಾಗಿತ್ತು.

ಇದರೊಂದಿಗೆ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಡೆದ (2ನೇ ಪುಟಕ್ಕೆ)

## ಆನ್‌ಲೈನ್ ಸುದ್ದಿ, ಕಾರ್ಯಕ್ರಮ ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ

ನವದೆಹಲಿ, ನ. 11 - ಆನ್‌ಲೈನ್ ವೇದಿಕೆಯಲ್ಲಿರುವ ಚಲನಚಿತ್ರಗಳು, ದೃಶ್ಯ ಸರಣಿಗಳು, ಸುದ್ದಿಗಳು ಹಾಗೂ ಪ್ರಸಕ್ತ ವ್ಯವಹಾರಗಳ ಕುರಿತ ವಿವರಗಳನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ವ್ಯಾಪ್ತಿಗೆ ತರಲಾಗಿದೆ.

ಈ ಬಗ್ಗೆ ಸಂಪುಟ ಕಾರ್ಯದರ್ಶಿ ಮಂಗಳವಾರ ರಾತ್ರಿ ಅಧಿಸೂಚನೆ ಹೊರಡಿಸಿದ್ದಾರೆ. ಇದರಿಂದಾಗಿ ನೆಟ್‌ಫ್ಲಿಕ್ಸ್ ರೀತಿಯ ಮಾಧ್ಯಮಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಸಚಿವಾಲಯದ ನಿಯಂತ್ರಣಕ್ಕೆ ಬರಲಿವೆ.

**ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ನಿಯಂತ್ರಣ ಹೇರುವ ಅಧಿಸೂಚನೆಗೆ ರಾಷ್ಟ್ರಪತಿ ಅಂಕಿತ**

ಈ ಅಧಿಸೂಚನೆಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಸಹಿ ಹಾಕಿದ್ದಾರೆ. ಈ ಮೂಲಕ ಆನ್‌ಲೈನ್‌ನ ಸುದ್ದಿ, ಆಡಿಯೋ, ದೃಶ್ಯ ಹಾಗೂ ಚಲನಚಿತ್ರಗಳನ್ನು ಸಚಿವಾಲಯ ನಿಯಂತ್ರಿಸಬಹುದಾಗಿದೆ.

ಆನ್‌ಲೈನ್ ಮೂಲಕ ಪ್ರಸಾರ ಮಾಡುವ ಕಾರ್ಯಕ್ರಮಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ಪ್ರತ್ಯೇಕ ಸಂಸ್ಥೆ ರೂಪಿಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ನ್ಯಾಯಾಲಯ ಸರ್ಕಾರದ ಅಭಿಪ್ರಾಯ ಕೇಳಿತ್ತು. ಸರ್ಕಾರದ ನಿರ್ಧಾರದಿಂದಾಗಿ ಇದುವರೆಗೂ ಅನಿಯಂತ್ರಿತವಾಗಿದ್ದ ಒ.ಟಿ.ಟಿ. ವೇದಿಕೆ ಇನ್ನು ಮುಂದೆ ನಿಯಂತ್ರಣಕ್ಕೆ ಬರಲಿದೆ.

ಜನವರಿ 2019ರಲ್ಲಿ ಎಂಟು ವಿಡಿಯೋ ಪ್ರಸಾರ ಸಂಸ್ಥೆಗಳು ಸ್ವಯಂ ನಿಯಂತ್ರಣದ ಮಾರ್ಗಸೂಚಿಗಳಿಗೆ ಸಹಿ ಹಾಕಿದ್ದವು. ಆದರೆ, ಇದಕ್ಕೆ ಮಾನ್ಯತೆ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿತ್ತು.

## ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಶಿಕ್ಷೆ ಹೆಚ್ಚಾಗಲಿ

ಬೆಂಗಳೂರು, ನ. 11 - ಪರಿಶಿಷ್ಟ ಜಾತಿ, ಜನಾಂಗದವರ ಮೇಲೆ ದೌರ್ಜನ್ಯ ಎಸಗುವವರ ವಿರುದ್ಧ ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಪೊಲೀಸ್ ಮತ್ತು ರಾಜ್ಯದ ವ್ಯಾಜ್ಯ ಹಾಗೂ ನ್ಯಾಯದಾನ ಇಲಾಖೆ ಹೆಚ್ಚು ಮುತುವರ್ಜಿ ವಹಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಅವರು ಇಂದು ಸಮಾಜ ಕಲ್ಯಾಣ ಇಲಾಖೆಯ ದೌರ್ಜನ್ಯ ಪ್ರತಿಬಂಧ ಅಧಿನಿಯಮದಡಿ ಏರ್ಪಡಿಸಿದ್ದ ರಾಜ್ಯಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸಭೆಯಲ್ಲಿ ಈ ಸೂಚನೆ ನೀಡಿದರು.

ಎಲ್ಲಾ ಪೊಲೀಸ್ ಅಧಿಕಾರಿಗಳು ದೌರ್ಜನ್ಯ ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಿಸಬೇಕು ಮತ್ತು ಸಂಬಂಧಿಸಿದ ಸೆಕ್ಷನ್‌ಗಳನ್ನು ಅನುಮೋದಿಸಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ಪೊಲೀಸ್ ಅಧಿಕಾರಿಗಳಿಂದ 60 ದಿನಗಳೊಳಗೆ ತನಿಖೆ ಮುಗಿಸಿ ಆರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಬಗ್ಗೆ ಕ್ರಮವಹಿಸಲು ಮತ್ತು ವಿಚಾರಣೆಯಲ್ಲಿ ಯಾವುದೇ ಲೋಪವಾಗದಂತೆ ಜಾಗರೂಕತೆ ವಹಿಸಬೇಕು. ಅಲ್ಲದೇ ಸಾಕ್ಷಿದಾರರು ಮತ್ತು ಸಂತ್ರಸ್ತರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ದೂರು ಸಲ್ಲಿಸುವ



ಸಂದರ್ಭವನ್ನೂ ವಿಡಿಯೋ ರೆಕಾರ್ಡಿಂಗ್ ಮಾಡಲು ಕ್ರಮ ವಹಿಸುವಂತೆ ಪೊಲೀಸ್ ಇಲಾಖೆಗೆ ಮುಖ್ಯಮಂತ್ರಿಗಳು ಸೂಚಿಸಿದರು.

ದೌರ್ಜನ್ಯಕ್ಕೆ ಒಳಪಟ್ಟ ಸಂತ್ರಸ್ತರಿಗೆ ನಿಯಮಾ ನುಸಾರ ಪರಿಹಾರ ಧನವನ್ನು ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ 30 ಕೋಟಿ ರೂ.ಗಳ ಅನುದಾನವನ್ನು ಒದಗಿಸಿದ್ದು, ಈ ಪೈಕಿ 15 ಕೋಟಿ ರೂ.ಗಳ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ದೌರ್ಜನ್ಯಕ್ಕೆ ಒಳಗಾದವರಿಗೆ ನಿಗದಿತ ಸಮಯದೊಳಗೆ ಪರಿಹಾರ ನೀಡಲು ಜಿಲ್ಲಾಧಿಕಾರಿಗಳು ಕ್ರಮ (3ನೇ ಪುಟಕ್ಕೆ)

## ಕೊರೊನಾ : ರಷ್ಯಾದ ಸ್ಪುಟ್ನಿಕ್ ಲಸಿಕೆ ಶೇ.92ರಷ್ಟು ಪರಿಣಾಮಕಾರಿ

ಹೈದರಾಬಾದ್, ನ. 11 – ರಷ್ಯಾ ರೂಪಿಸಿರುವ ಸ್ಪುಟ್ನಿಕ್ - 5 ಲಸಿಕೆಯು ಕೊರೊನಾದ ವಿರುದ್ಧ ಶೇ.92ರಷ್ಟು ರಕ್ಷಣೆ ನೀಡುತ್ತದೆ ಎಂದು ತಿಳಿಸಲಾಗಿದೆ.

ಮೂರನೇ ಹಂತದಲ್ಲಿ 40 ಸಾವಿರ ಜನರನ್ನು ಪ್ರಯೋಗಕ್ಕೆ ಒಳಪಡಿಸಲಾಗಿದೆ. ಈ ಸಂದರ್ಭದಲ್ಲಿ ಶೇ.92ರಷ್ಟು ಜನರಿಗೆ ಕೊರೊನಾದಿಂದ ರಕ್ಷಣೆ ದೊರೆತಿದೆ ಎಂದು ರಷ್ಯಾದ ಗಮಾಲೆಯ ನ್ಯಾಷನಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡಮಾಲಜಿ ಹಾಗೂ ಮೈಕ್ರೋಬಯಾಲಜಿ ಸಂಸ್ಥೆ ತಿಳಿಸಿದೆ. 16 ಸಾವಿರ ಸ್ವಯಂ (3ನೇ ಪುಟಕ್ಕೆ)

## ಭದ್ರಾ : ನ.20ಕ್ಕೆ ಕಾಲುವೆಯಲ್ಲಿ ನೀರು ನಿಲುಗಡೆಗೆ ನಿರ್ಧಾರ



ಶಿವಮೊಗ್ಗ, ನ. 11- ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪವಿತ್ರ ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮಲವಗೊಪ್ಪದಲ್ಲಿರುವ ಪ್ರಾಧಿಕಾರದ ಸಭಾಂಗಣದಲ್ಲಿ ಬುಧವಾರ ನೀರು ಸಲಹಾ ಸಮಿತಿಯ ಸಭೆ ದೀರ್ಘ ಕಾಲದ ನಂತರ ನಡೆಯಿತು.

ಸಭೆಯಲ್ಲಿ ಭದ್ರಾ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯ ಮುಂಗಾರು ಹಂಗಾಮಿನ ಬೆಳೆಗಳಿಗೆ ಭದ್ರಾ ಜಲಾಶಯದಿಂದ ಜುಲೈ ತಿಂಗಳ 22ರಿಂದ ನೀರು ಹರಿಸಲಾಗುತ್ತಿದ್ದು, ಪ್ರಾಧಿಕಾರದ ಬೈಲಾ ಪ್ರಕಾರ 120 ದಿನಗಳು ಮಾತ್ರ ನೀರು ಹರಿಸಬೇಕಿದ್ದು, ನವೆಂಬರ್ 19ಕ್ಕೆ ಅವಧಿ ಪೂರ್ಣಗೊಳ್ಳಲಿದೆ. ಈ ಸಂಬಂಧ ಅಧಿಕಾರಿಗಳೊಂದಿಗೆ, ಅಚ್ಚುಕಟ್ಟು ವ್ಯಾಪ್ತಿಯ ರೈತರೊಂದಿಗೆ ಸುದೀರ್ಘ ಚರ್ಚೆ ನಡೆಸಿದ ನಂತರ ನವೆಂಬರ್ 20ರ ಮಧ್ಯರಾತ್ರಿ 12 ಗಂಟೆಗೆ ನೀರು ನಿಲ್ಲಿಸಲು ಸಭೆಯಲ್ಲಿ ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು.

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ಹೊಸಳ್ಳಿಯ ವೈ. ದ್ಯಾವಪ್ಪ ರೆಡ್ಡಿ, ಕಾಡಾ ಸದಸ್ಯರಾದ ಷಡಾಕ್ಷರಿ, ರುದ್ರಮೂರ್ತಿ, ರೈತ ಮುಖಂಡರಾದ ತೇಜಸ್ವಿ ಪಟೇಲ್ , ರಾಜ್ಯ ರೈತ ಸಂಘದ ಬಸವರಾಜಪ್ಪ, ಜಿಲ್ಲಾ ಪೊಲೀಸ್ ಉಪ ವರಿಷ್ಠಾಧಿಕಾರಿ ಶೇಖರ್.ಟಿ., ಮುಖ್ಯ ಎಂಜಿನಿಯರ್ ಯತೀಶ್ ಚಂದ್ರ, ಕಾಡಾ ಆಡಳಿತಾಧಿಕಾರಿ ಕೃಷ್ಣ ಮೂರ್ತಿ ಹಾಗೂ ಇನ್ನೂ ಹಲವಾರು ಪ್ರಮುಖರು, ರೈತ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು,

## ಆನ್‌ಲೈನ್ ಮಾಧ್ಯಮದ 'ಸೆನ್ಸಾರ್'ಗೆ ಆಕ್ಷೇಪ

ನವದೆಹಲಿ, ನ. 11 - ಆನ್‌ಲೈನ್ ಮಾಧ್ಯಮವನ್ನು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ನಿಯಂತ್ರಣಕ್ಕೆ ಒಳಪಡಿಸುವುದರಿಂದ ಭಾರತದ ನಿರ್ಮಾಪಕರು ಅಂತರರಾಷ್ಟ್ರೀಯ ವೇದಿಕೆಯಲ್ಲಿ ಹಿನ್ನಡೆ ಕಾಣುತ್ತಾರೆ ಎಂದು ಲೇಖಕರು ಹಾಗೂ ನಿರ್ದೇಶಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸುದ್ದಿಗಳೂ ಸೇರಿದಂತೆ ಆನ್‌ಲೈನ್ ಮಾಧ್ಯಮವನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಇಲಾಖೆಯ ವ್ಯಾಪ್ತಿಗೆ ತರಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಹನ್ಸಲ್ ಮೆಹ್ತಾ ಹಾಗೂ ರೀಮಾ ಕಾಗ್ತಿ ಸೇರಿದಂತೆ ಹಲವು ಚಿತ್ರ ನಿರ್ಮಾಪಕರು, ಸರ್ಕಾರದ ಕ್ರಮ ಸರಿಯಲ್ಲ ಎಂದು ಹೇಳಿದ್ದಾರೆ.

ಆದರೆ, ಸ್ವಯಂ ನಿಯಂತ್ರಣದ ದಿಸೆಯಲ್ಲಿ ಸರ್ಕಾರದ ಜೊತೆ ಕಾರ್ಯ ನಿರ್ವಹಿಸುವುದನ್ನು ನಿರೀಕ್ಷಿಸುತ್ತಿರುವುದಾಗಿ ಎಂಎಕ್ಸ್ ಪ್ಲೇಯರ್ ಸಿಇಒ ಕರಣ್ ಬೇಡಿ ಹೇಳಿದ್ದಾರೆ. ಒ.ಟಿ.ಟಿ. ವೇದಿಕೆಯ ಹಲವು ಪ್ರಮುಖರು ಈ ಬಗ್ಗೆ




ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ.

ಸರ್ಕಾರದ ಕ್ರಮದಿಂದ ಭಾರತೀಯ ನಿರ್ಮಾಪಕರಿಗೆ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಹಿನ್ನಡೆಯಾಗಲಿದೆ. ಕಾನೂನು ಕ್ರಮಗಳು ಯಾವ ರೀತಿ ಇರಲಿವೆ ಎಂಬುದು ನಮಗೆ ತಿಳಿದಿಲ್ಲ. ಮಾರ್ಗಸೂಚಿಗಳ ಬಗ್ಗೆ ನಾವು ಕಾದು ನೋಡಬೇಕಿದೆ ಎಂದು ರೀಮಾ ಕಾಗ್ತಿ ಹೇಳಿದ್ದಾರೆ.

ಮಾಧ್ಯಮದ ಮೇಲೆ ಯಾವುದೇ ಸೆನ್ಸಾರ್ ಇರಬಾರದು. ಆಯ್ಕೆಯನ್ನು ನಾಗರಿಕರಿಗೆ ಬಿಡಬೇಕು ಎಂದು ಅಲಂಕ್ರಿತ ಶ್ರೀವಾಸ್ತವ ಹೇಳಿದ್ದಾರೆ.

ಸರ್ಕಾರದ ಕ್ರಮವನ್ನು ಒಪ್ಪಲಾಗದು ಎಂದಿರುವ ನಿರ್ದೇಶಕ ಅಂಶುಮಾನ್, ಪ್ರೇಕ್ಷಕರು ಹಾಗೂ ನಿರ್ಮಾಪಕರಿಬ್ಬರೂ ಸೆನ್ಸಾರ್ ಅನ್ನು ಪ್ರಶ್ನಿಸಬೇಕು ಎಂದಿದ್ದಾರೆ.

## ಮಾಸ್ಕ್ : ದಾಳಿಗಿಳಿದ ತಹಶೀಲ್ದಾರ್‌ಗೆ ಏಕವಚನದಲ್ಲಿ ನಿಂದಿಸಿದ ಮಹಿಳೆ

ದಾವಣಗೆರೆ, ನ.11- ಸರಿಯಾಗಿ ಮಾಸ್ಕ್ ಧರಿಸದೇ ಹಬ್ಬದ ಖರೀದಿ ಭರಾಟೆಯಲ್ಲಿ ನಿರತರಾಗಿರುವ ಬಗ್ಗೆ ಬಂದ ದೂರಿನ ಮೇರೆಗೆ ದಾಳಿ ನಡೆಸಿ ದಂಡದ ಬಿಸಿ ಮುಟ್ಟಿಸಲು ಮುಂದಾದ ಇಲ್ಲಿನ ತಹಸೀಲ್ದಾರ್ ಗೆ ಮಾಸ್ಕ್ ಧರಿಸದ ಮಹಿಳೆಯೋರ್ವರು ಏಕವಚನದಲ್ಲಿ ನಿಂದಿಸಿ ಘಾಸಿಗೊಳಿಸಿದ ಘಟನೆ ನಗರದಲ್ಲಿ ಇಂದು ನಡೆದಿದೆ.

ದೀಪಾವಳಿ ಹಬ್ಬದ ಖರೀದಿಗೆ ಬಂದವರು ಸಾಮಾಜಿಕ ಅಂತರ ಕಾಯ್ದುಕೊಳ್ಳುವ, ಮಾಸ್ಕ್ ಧರಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುವಂತೆ ಬಂದ ದೂರಿನ ಮೇರೆಗೆ ತಹಸೀಲ್ದಾರ್ ಗಿರೀಶ್ ಅವರು ಕಾಳಿಕಾದೇವಿ ರಸ್ತೆಯಲ್ಲಿ ಪರಿಶೀಲನೆಗೆ ಭೇಟಿ ನೀಡಿದ್ದರು.

ಆಗ ಮಾಸ್ಕ್ ಧರಿಸದೇ ಮಕ್ಕಳ ಸಮೇತ ಸಾರ್ವಜನಿಕವಾಗಿ ರಸ್ತೆಯಲ್ಲಿ ಹೊರಟಿದ್ದ ಮಹಿಳೆಯನ್ನು ತಡೆದು ಮಾಸ್ಕ್ ಧರಿಸುವಂತೆ ಅರಿವು ಮೂಡಿಸಲು ಹೋದರು. ಆಗ ಆಕೆ ತನ್ನೊಡನೆ ಬಂದಿದ್ದ ಮಕ್ಕಳಿಗೆ ಬೆದರಿಸುತ್ತಾ, ತಹಸೀಲ್ದಾರ್



**ಮಾಸ್ಕ್ ಧರಿಸದೇ ಹಬ್ಬದ ಖರೀದಿಯ ದೂರು**

ಎಂಬ ಅರಿವಿಲ್ಲದೇ ನಾವು ದೆಹಲಿಯಿಂದ ಬಂದಿದ್ದೇವೆ. ಕೊರೊನಾ ಬಗ್ಗೆ ನಮಗೂ ಪರಿಜ್ಞಾನವಿದೆ. ನಿನಗೆ ಇದೆಯೇ ಎಂದು ಏಕಾಏಕಿ ತಹಶೀಲ್ದಾರ್ ಗಿರೀಶ್ ಅವರೊಂದಿಗೆ ಏಕವಚನದಲ್ಲಿ ವಾಗ್ವಾದಕ್ಕಿಳಿದು ಅಗೌರವದಿಂದ ವರ್ತಿಸುತ್ತಾ ಮುಂದೆ ಸಾಗಿದಳು.

ತಾಳ್ಮೆಯಿಂದಲೇ ಇದ್ದ ತಹಶೀಲ್ದಾರ್ ಗಿರೀಶ್ ಅವರು ಏಕವಚನದ ಮಾತುಗಳು ಕೇಳಿದಾಕ್ಷಣವೇ ಆ ಮಹಿಳೆಯ ಬೆನ್ನು ಹತ್ತಿ ತಡೆದರು. ಅಲ್ಲದೇ, ಮಹಿಳಾ ಪೊಲೀಸ್ ಸಹಾಯಕ ಸಬ್ ಇನ್ ಸ್ಪೆಕ್ಟರ್‌ಗಳು ಹಾಗೂ ಮಹಿಳಾ ಪೇದೆಗಳು ವಶಕ್ಕೆ ಪಡೆದು ಜಾಗೃತಿ ಮೂಡಿಸುತ್ತಿರುವ ಬಗ್ಗೆ ಮನವರಿಕೆ ಮಾಡಲು ಹೋದಾಗಲೂ ಸಹ ಆ ಮಹಿಳೆ ತಹಶೀಲ್ದಾರ್ ಗಿರೀಶ್ ಅವರಿಗೆ ಏಕವಚನ ಬಳಸಿದ್ದಾಳೆ. ಮಕ್ಕಳಿಗೂ ಮಾಸ್ಕ್ ಹಾಕದೇ ಅಜಾಗರೂಕತೆ ತೋರಿದ ಕಾರಣ ದಂಡ ಕಟ್ಟುವಂತೆ ಜೋರು ಮಾಡುತ್ತಿದ್ದಂತೆ ಆ (3ನೇ ಪುಟಕ್ಕೆ)

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ.ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ 30×50, 30×48, 20×30, 50×50, 50×70
94481-85946

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, 30x50 ಪೂರ್ವ. ವಾಜಪೇಯಿ ಬಡಾವಣೆಯಲ್ಲಿ 35x50 (ಕಾರ್ನರ್) ಪಶ್ಚಿಮ ದಕ್ಷಿಣ, 30x40 ಪೂರ್ವ
ಶಾಮನೂರು ಧನ್ಯಕುಮಾರ್: 97415 62589
ಸ್ವಾಮಿ ಏಜೆಂಟ್: 97421 44715

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಬೇಕಾಗಿದ್ದಾರೆ**
ಅಡುಗೆ ಭಟ್ಟರು, ಸಪ್ಲೇಯರ್, ಕ್ಲೀನರ್, ಹೋಟೆಲ್‌ನಲ್ಲಿ ಕೆಲಸ ಮಾಡಲು ಆಸಕ್ತರು ಬೇಕಾಗಿದ್ದಾರೆ.
99861 17995

**ಬೇಕಾಗಿದ್ದಾರೆ**
ಅರಿಹಂತ್ ಸೆರಾಮಿಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ದ್ವಿತೀಯ ಪಿ.ಯು.ಸಿ ಪಾಸ್/ಫೇಲ್ ಆದ ಯುವಕರು ಬೇಕಾಗಿದ್ದಾರೆ. Resume ಕಡ್ಡಾಯವಾಗಿ ತರತಕ್ಕದ್ದು.
63623 80851
99013 04162

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಆಂಜನೇಯ ಬಡಾವಣೆಯಲ್ಲಿರುವ 35x50 ಅಡಿ ಅಳತೆಯಲ್ಲಿರುವ ಎರಡು ಬೆಡ್ ರೂಂನ ಸುಸಜ್ಜಿತವಾದ ಉತ್ತರ ದಿಕ್ಕಿಗಿರುವ ಇಂಡಿಪೆಂಡೆಂಟ್ RCC ಮನೆ ಮಾರಾಟಕ್ಕಿದೆ.
99454 62045, 94801 24623
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಬೇಕಾಗಿದ್ದಾರೆ**
ಪಾಂಪ್ಲೆಟ್ಸ್ ಹಂಚಲು ಹಾಗೂ ಮಾರ್ಕೆಟಿಂಗ್ ಮಾಡಲು ಯುವಕರು ಬೇಕಾಗಿದ್ದಾರೆ. ವೇತನ: 5000. ಸಂಪರ್ಕಿಸಿರಿ:
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ನಿಟುವಳ್ಳಿ ರಸ್ತೆ, ದಾವಣಗೆರೆ.
86602 35013

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ, #774, 7ನೇ ಕ್ರಾಸ್, 2ನೇ ಮೇನ್ ಪಕ್ಕದ, 1ನೇ ಮಹಡಿಯಲ್ಲಿರುವ ವಿಶಾಲವಾದ ಬೆಡ್ ರೂಂ. ಅಡುಗೆ ಮನೆ, ದೇವರಮನೆ, ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮತ್ತು ವಾಸ್ತು ಇರುವ ಮನೆ ಬಾಡಿಗೆಗಿದೆ.
99643 27943

**2 BHK HOUSE FOR RENT**
East face Ground floor, 2581/5, 4th main, North Sridhar Aqurium Cross, M.C.C. A Block, DVG-4.
95356 59259 94489 24513

**ಹಾಲ್ ದೊರೆಯುತ್ತದೆ**
ಸಣ್ಣ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಹಾಲ್ ದೊರೆಯುತ್ತದೆ.
ಹೋಟೆಲ್ ಶೋವೆನ್
ಡಿ.ಸಿ ಕಛೇರಿ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : ಫೋ. : 08192- 237277
ಮೊ. : 8152882277,8549882277

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಮಳಿಗೆ ಖಾಲಿ ಇದೆ**
ನರಸರಾಜ ರಸ್ತೆಯಲ್ಲಿ ಕಾರ್ನರ್ ಮಳಿಗೆ ಖಾಲಿ ಇದೆ. ಆಸಕ್ತರು ಸಂಪರ್ಕಿಸಿ:
70199 88456

**ಬಾಡಿಗೆಗೆ ಇದೆ**
3 ಬೆಡ್‌ರೂಂವುಳ್ಳ, ಬೋರ್‌ವೆಲ್ ವ್ಯವಸ್ಥೆಯಿರುವ ಕಛೇರಿ ಮತ್ತು ವಾಸಕ್ಕೆ ಅನುಕೂಲವಿರುವ ಮನೆಯೊಂದು ಮೊದಲನೇ ಮಹಡಿಯಲ್ಲಿ ಬಾಡಿಗೆಗಿದೆ
ಸಂಪರ್ಕಿಸಿ: ಶಿವಕುಮಾರ್
ಬಳ್ಳಾರಿ ಸಿದ್ದಮ್ಮ ಪಾರ್ಕ್ ಹತ್ತಿರ, ಕೆ.ಬಿ.ಬಡಾವಣೆ, ದಾವಣಗೆರೆ.
81478 74601, 99862 11294

**ಜಮೀನು ಮಾರಾಟಕ್ಕಿದೆ**
335/A-4-08} 6-51
335/B-2-43} ಸೆಂಟ್ಸ್
2 ಪಂಪ್ ಸೆಟ್ಸ್ ಹೊಂದಿರುವ ಪುಣಬಗಟ್ಟೆ ಗ್ರಾಮದ ಸರ್ವೆ ನಂ. ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
99726 02950

**ವಧು ಬೇಕಾಗಿದೆ**
ಆಸ್ತಿ, ಜಮೀನು ಹೊಂದಿರುವ 35 ವರ್ಷದ ಸಾಧು ಲಿಂಗಾಯತ ವರನಿಗೆ 35 ವರ್ಷದೊಳಗಿನ ಲಿಂಗಾಯತ ವಧು ಬೇಕಾಗಿದೆ.
ಸಂಪರ್ಕಿಸಿ :
78925 76029

**ಮಳಿಗೆ (20'x40') ಬಾಡಿಗೆಗೆ ಇದೆ**
ಅಲಹಾಬಾದ್ ಬ್ಯಾಂಕ್ ಬಿಲ್ಡಿಂಗ್ ಹಿಂಭಾಗ, ಉತ್ತರ ದಿಕ್ಕಿನ ಮಳಿಗೆ Unity hospital ಎದುರು ಎ.ವಿ.ಕೆ. ಕಾಲೇಜು ರೋಡ್ ಪಿ.ಜೆ. ಬಡಾವಣೆಯಲ್ಲಿ ಬಾಡಿಗೆಗೆ ಇದೆ.
98443 06262

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್ ಲೇಔಟ್, 2ನೇ ಕ್ರಾಸ್, ಲಕ್ಷ್ಮೀ ಫ್ಲೋರ್ ಮಿಲ್ ಹಿಂಭಾಗ ವಿ.ವಿ. ರೆಸಿಡೆನ್ಸಿಯಲ್ಲಿ ಕಾರ್‌ಪಾರ್ಕಿಂಗ್, ಬೋರ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ 2BHK ಮನೆ ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
94481 34340
94487 27266

**Wanted**
Sales Person 5 No's
PUC, Any Degree
Accountant - 5 No's
Qualifiction - BBM, MBA, B.Com, M.Com
Hullumane Properties & Power Pvt Ltd
hullumaneproperties_pwr@yahoo.com

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ.
RS. 899 Per Sq ft
ದೀಪಾವಳಿ ವಿಶೇಷ ರಿಯಾಯಿತಿಯಲ್ಲಿ
93431 10009
98441 24217
86603 11021

**ಸ್ವಂತ ಉದ್ಯೋಗ**
ಸೀರೆ/ಬಟ್ಟೆ ವ್ಯಾಪಾರ ಮಾಡುವ ಮಹಿಳೆಯರಿಗೆ ಸುವರ್ಣ ಅವಕಾಶ. ಪಡೆಯಿರಿ ಆಕರ್ಷಕ ಸೀರೆಗಳು, ಹೊಸ ಡಿಸೈನ್ ಗಳಲ್ಲಿ, ಹೋಲ್ ಸೇಲ್ ದರದಲ್ಲಿ ಮಾರಾಟ, ಬಂಡವಾಳದ 50% ಮೊದಲು ಪಾವತಿಸಿ ಬಾಕಿ ಹಣ ನಂತರ ಪಾವತಿಸಬಹುದು. ಆಸಕ್ತರು ಕೂಡಲೇ ಸಂಪರ್ಕಿಸಿ: 72596 60786

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಮಾಳಗೊಂಡನಹಳ್ಳಿ, ಹರಪನಹಳ್ಳಿ ರೋಡ್‌ನಲ್ಲಿ 3ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಹೋಂ ನರ್ಸಿಂಗ್ ಸೇವೆ & ಕೆಲಸ**
ಆಸ್ಪತ್ರೆಗಳಿಗೆ, ಮನೆಗಳಿಗೆ, ವೃದ್ದರು, ರೋಗಿಗಳನ್ನು ಆರೈಕೆ ಮಾಡಲು ಅನುಭವವಿರುವ ಹೋಂ ನರ್ಸ್‌ಗಳನ್ನು ಕಳುಹಿಸಲಾಗುವುದು. ಮಹಿಳೆಯರಿಗೆ, ಪುರುಷರಿಗೆ ಹೋಂ ನರ್ಸಿಂಗ್ ಕೆಲಸ ಲಭ್ಯವಿದೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಊಟ,ವಸತಿ ಉಚಿತ.
95139 17777
95136 58555

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಎಂ. ಗಣೇಶ್ ನಿಧನ**



ದಾವಣಗೆರೆ ನಗರದ ಎಸ್.ಎಸ್. ಲೇ ಔಟ್ 'ಎ' ಬ್ಲಾಕ್ ಗಣೇಶ್ ಸರ್ವೀಸ್ ಸ್ಟೇಷನ್ ಮಾಲೀಕರಾದ ಎಂ. ಗಣೇಶ್ (45) ಅವರು ದಿನಾಂಕ 11.11.2020ರ ಬುಧವಾರ ಸಂಜೆ 6.45ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.11.2020ರ ಗುರುವಾರ ಮಧ್ಯಾಹ್ನ 12.30 ಕ್ಕೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ಶ್ರೀಮತಿ ಸಿದ್ದಲಿಂಗಮ್ಮ ಗೋಪಾಲಪುರ ನಿಧನ**



ದಾವಣಗೆರೆ ಮಹಾರಾಜ ಪೇಟೆ, ಕಡ್ಲೆಬಾಳು ನಂಜಪ್ಪ ಗಲ್ಲಿ ವಾಸಿ ದಿ.ಗಣಪ ಗೋಪಾಲಪುರ ಇವರ ಧರ್ಮಪತ್ನಿ ಶ್ರೀಮತಿ ಸಿದ್ದಲಿಂಗಮ್ಮ (89) ಅವರು ದಿನಾಂಕ: 11.11.2020 ರ ಬುಧವಾರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 12.11.2020 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಹೈಟೆಕ್ ವಯೋವೃದ್ದರ ಆರೈಕ ಕೇಂದ್ರ**
ನಮ್ಮಲ್ಲಿ ಪಾರ್ಶ್ವವಾಯು, ವೃದ್ದರು, ಕೈ ಕಾಲು ಸ್ವಾಧೀನ ಇಲ್ಲದವರು, ಮಾನಸಿಕರನ್ನು ನಮ್ಮಲ್ಲಿ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು. ದಾವಣಗೆರೆ
89711 92936
76250 15036

**ಸೈಟುಗಳು ಮಾರಾಟಕ್ಕಿವೆ**
ನವೋದಯ ಶಾಲೆ ಹತ್ತಿರ, ನಿಜಲಿಂಗಪ್ಪ ಬಡಾವಣೆಯಲ್ಲಿ 30x50 South, 40x60 South, 35x60 North west corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಕೆಲಸಕ್ಕೆ ಬೇಕಾಗಿದ್ದಾರೆ**
ಕೃಷಿಯಲ್ಲಿ ಆಸಕ್ತಿ ಇರುವವರು ಫೀಲ್ಡ್ ಮೇಲೆ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಕೃಷಿ ಡಿಪ್ಲೋಮಾ ಮಾಡಿದವರಿಗೆ ಮೊದಲ ಆದ್ಯತೆ.
ಕಿಸಾನ್ ವರ್ಲ್ಡ್, ಭವಾನಿ ರೈಸ್ ಮಿಲ್, ವಾಣಿ ರೈಸ್ ಮಿಲ್ ಎದುರು, ಹದಡಿ ರಸ್ತೆ, ದಾವಣಗೆರೆ. (ಬೈಕ್ ಇರಬೇಕು)
9480767064, 9964212379

**ದೂರ ಶಿಕ್ಷಣ ಪರೀಕ್ಷೆಗಳು**
UGC, AICT & DEB Recognisde University
S.S.L.C. PUC, B.A, B.Com, B.Sc, B.C.A, M.A, M.Com, M.Sc, B.Lib, M.Lib, M.B.A, M.C.A. Diploma Course, B.Tech, Para Medical Course & All Courses
77609 55550, 96200 28627

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813


**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗೆ ಅಭ್ಯರ್ಥಿಗಳು ಹಾಗೂ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ. ತಿಂಗಳಿಗೆ 9000/- ದಿಂದ 15000 ಸಂಪಾದಿಸ ಬಹುದು, ಫುಲ್ ಟೈಮ್, ಪಾರ್ಟ್ ಟೈಮ್ ಕೆಲಸ ಮಾಡಲು ಅವಕಾಶವಿದೆ.
ಸಂದರ್ಶನ ಸಮಯ: ಸಂಜೆ 4.30 ರಿಂದ 6.30ರವರೆಗೆ
ವಿ.ಸೂ: ಶಾಪ್+ಡಿಸ್ಟ್ರಿಬ್ಯೂಷನ್ ಮಾಡುವವರಿಗೆ ಅವಕಾಶವಿದೆ. ನಿಯಮಗಳು ಅನ್ವಯ
ಸಂಪರ್ಕಿಸಿ:
ಸಮೃದ್ಧಿ ಏಜೆನ್ಸೀಸ್
ಅಕ್ಸಿಲ್ ಸೂಪರ್ ಮಾರ್ಟ್, 2ನೇ ಮಹಡಿ, ಆಹಾರ್ 2000 ಎದುರು, ಕಾಂತೇಶ ಪ್ಲಾಜಾ, ಗಾಂಧಿ ಸರ್ಕಲ್, ದಾವಣಗೆರೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

॥ ಶ್ರೀ ವೀರಹನುಮಾನ್ ಪ್ರಸನ್ನ ॥ ॥ ಶ್ರೀ ಆದಿನಾಥಾಯ ನಮಃ ॥

## ಶ್ರದ್ಧಾಂಜಲಿ ಕಾರ್ಯಕ್ರಮ



**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್ ಜೀ**

ಮಾಲೀಕರು : ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ., ಶ್ರೀ ವೀರಹನುಮಾನ್ ರೈಸ್ ಮಿಲ್, ಶ್ರೀ ವೀರಹನುಮಾನ್ ಆಗ್ರೋ ರೈಸ್‌ಟೆಕ್
ಟ್ರಸ್ಟಿಗಳು : ಶ್ರೀ ಸುಪಾರ್ಶ್ವನಾಥ್ ಜೈನ್‌ಮೂರ್ತಿ ಪೂಜಕ ಸಂಘ,
ಅಧ್ಯಕ್ಷರು : ಶ್ರೀ ಆದಿನಾಥ ಜೈನ್ ಮಂದಿರ

ಆತ್ಮೀಯರೇ,
ನನ್ನ ಸಹೋದರನಾದ
**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್ ಜೀ**
ಇವರು ದಿನಾಂಕ 5-11-2020 ನೇ ಗುರುವಾರ ದೈವಾಧೀನರಾದ ಪ್ರಯುಕ್ತ ದಿನಾಂಕ 13-11-2020 ನೇ ಶುಕ್ರವಾರ ಮಧ್ಯಾಹ್ನ 12-30 ಗಂಟೆಗೆ **ಭಾವಪೂರ್ಣ ಶ್ರದ್ಧಾಂಜಲಿ** ಕಾರ್ಯಕ್ರಮವನ್ನು **ಶ್ರೀ ವೀರಹನುಮಾನ್ ಆಗ್ರೋ ರೈಸ್ ಟೆಕ್** ಲೋಕಿಕೆರೆ ರಸ್ತೆ, ದಾವಣಗೆರೆ. ಇಲ್ಲಿ ಏರ್ಪಡಿಸಿರುತ್ತೇವೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಬೇಕಾಗಿ ಕೋರುತ್ತೇವೆ.

ಇಂತಿ ದುಃಖತಪ್ತರು,
ಚಗನ್‌ಲಾಲ್, ರಾಜೇಂದ್ರಕುಮಾರ್, ಕುಮಾರ್‌ಪಾಲ್, ಶ್ರೀಪಾಲ್, ಅನೂಜ್, ವಿನಯ್, ಜಿನೇಶ್, ಮೊಮ್ಮಕ್ಕಳು
S.V.A. GROUP ಸಿಬ್ಬಂದಿ ವರ್ಗ,
ವರ್ತಕರು, ರೈತರು ಹಾಗೂ ಬಂಧು – ಮಿತ್ರರು.

ಷಾ ವೀರ್‌ಚಂದ್ ಅಸಲಾಜಿ ಅಂಡ್ ಕೋ.,
ಶ್ರೀ ವೀರಹನುಮಾನ್ ರೈಸ್ ಮಿಲ್
ಶ್ರೀ ವೀರಹನುಮಾನ್ ಆಗ್ರೋ ರೈಸ್‌ಟೆಕ್, ದಾವಣಗೆರೆ.
ಮೊ. : 94484 86380, 94481 10206, 94498 28280

# ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯಿಂದ ಶಿಕ್ಷಣಕ್ಕೆ ಕಾಯಕಲ್ಪ

ಹರಿಹರ, ನ.11- ಕೋವಿಡ್ 19 ಕಾರಣಕ್ಕಾಗಿ ವಿದ್ಯಾರ್ಥಿಗಳಿಗೆ ಗಗನ ಕುಸುಮದಂತಾಗಿದ್ದ ಶಿಕ್ಷಣವನ್ನು ಸುಗಮ ಗೊಳಿಸಲು ಶ್ರೀ ಧರ್ಮಸ್ಥಳ ಗ್ರಾಮೀಣಾಭಿ ವೃದ್ಧಿ ಯೋಜನೆಯಿಂದ ಕಾಯಕಲ್ಪ ದೊರೆ ತಂತಾಗಿದೆ ಎಂದು ನಗರಸಭೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಹೇಳಿದರು.

ನಗರದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಕಚೇರಿಯಲ್ಲಿ ಆಯೋಜನೆ ಮಾಡಲಾಗಿದ್ದ ಜ್ಞಾನತಾಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ವರ್ಷಗಳಿಂದ ನಮ್ಮ ದೇಶವು ತಾಂತ್ರಿಕತೆಯಲ್ಲಿ ಹಿಂದುಳಿದಿತ್ತು. ಆದರೆ, ಜಾಗತೀಕರಣದಿಂದಾಗಿ ಶಿಕ್ಷಣ ವ್ಯವಸ್ಥೆಯು ಹಂತ, ಹಂತವಾಗಿ ಅಭಿವೃದ್ಧಿ ಯ ಕಡೆಗೆ ಸಾಗುತ್ತಿದೆ ಎಂಬುದನ್ನು ನಾವೆಲ್ಲಾ ಮನಗಾಣಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ, ಕಳೆದ ಹಲವಾರು ತಿಂಗಳಿನಿಂದ ತಾಲ್ಲೂಕಿ ನಲ್ಲಿರುವ ಶಾಲೆಗಳು ಇದುವರೆಗೂ ತೆರೆದಿಲ್ಲ. ಇದರಿಂದ ವಿದ್ಯಾರ್ಥಿ ಹಾಗೂ ಪೋಷಕರಿಗೆ ಒಂದು ರೀತಿಯ ಭಯ ಆವರಿಸಿತ್ತು. ಇದಕ್ಕೆ ಜೀವ ತುಂಬುವ ರೀತಿಯಲ್ಲಿ ನಮ್ಮ ಶಿಕ್ಷಕರು ಸಮುದಾಯ ಭವನ, ದೇವಾಲಯಗಳಲ್ಲಿ ಮಕ್ಕಳಿಗೆ ಪಾಠ-ಪ್ರವಚನ ಮಾಡುತ್ತಿದ್ದಾರೆ. ಕೋವಿಡ್ 19 ಅಧಿಕವಾಗಿ ಶಿಕ್ಷಕರಿಗೆ ಪರಿಣಾಮ ಬೀರುತ್ತಿದ್ದು, ಮನೆ ಮನೆ ಶಿಕ್ಷಣವನ್ನು ಕೈಬಿಡಲಾಯಿತು. ಆದರೆ ಇಂತಹ ಸಂದರ್ಭದಲ್ಲಿ ಧರ್ಮಸ್ಥಳ ಸಂಸ್ಥೆಯು ಅಪೂರ್ವವಾದ ಯೋಜನೆಯ ಮೂಲಕ ವಿದ್ಯಾರ್ಥಿಗಳಿಗೆ ಟ್ಯಾಬ್ ಮತ್ತು ಲ್ಯಾಪ್ ಟಾಪ್ ನಂತಹ ಆಧುನಿಕ ಉಪಕರಣಗಳನ್ನು ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.



**ಹರಿಹರ ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ ಶ್ಲಾಘನೆ**

ಧರ್ಮಸ್ಥಳ ಸಂಸ್ಥೆ ಯೋಜನಾಧಿಕಾರಿ ಗಣಪತಿ ಮಾಳಂಜಿ ಮಾತನಾಡಿ, ಈ ಯೋಜನೆಯು ರಾಜ್ಯದಾದ್ಯಂತ ಜಾರಿಯಾಗಿದ್ದು, ಸುಮಾರು ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರ ಅನುಕೂಲ ಪಡೆಯಲಿದ್ದಾರೆ. ಮತ್ತು ಸುಮಾರು 450ಕ್ಕೂ ಹೆಚ್ಚು ಗೌರವ ಶಿಕ್ಷಕರು ಸಹ ಸೇವೆ ಸಲ್ಲಿಸುತ್ತಿದ್ದಾರೆ ಎಂದು ತಿಳಿಸಿದರು.

ಜನಜಾಗೃತಿ ವೇದಿಕೆ ವಕೀಲ ಮಂಜುನಾಥ್, ಹಿರಿಯರಾದ ಬಾಬಣ್ಣ, ರಾಜಶೇಖರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸೋಂಕಿತರು 5 ಲಕ್ಷಕ್ಕೂ ಕಡಿಮೆ

(1ನೇ ಪುಟದಿಂದ) ಪತ್ತೆಯಾಗಿವೆ. ನಂತರದ ಸ್ಥಾನದಲ್ಲಿರುವ ಕೇರಳದಲ್ಲಿ 6,010 ಪ್ರಕರಣಗಳು ಪತ್ತೆಯಾಗಿವೆ.

ದೇಶದಲ್ಲೀಗ 4,94,657 ಸಕ್ರಿಯ ಸೋಂಕು ಪ್ರಕರಣಗಳಿವೆ. ಈ ಹಿಂದೆ ಜುಲೈ 28ರಂದು 4,96,988 ಸಕ್ರಿಯ ಸೋಂಕು ಪ್ರಕರಣಗಳಿದ್ದವು.

ದೇಶದ 20 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಕ್ರಿಯ ಸೋಂಕುಗಳ ಸಂಖ್ಯೆ 20 ಸಾವಿರಕ್ಕೂ ಕಡಿಮೆ ಇದೆ. ಕೇವಲ ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ಸಕ್ರಿಯ ಸೋಂಕುಗಳು 20 ಸಾವಿರಕ್ಕಿಂತ ಹೆಚ್ಚಾಗಿವೆ. ಮಹಾರಾಷ್ಟ್ರ ಹಾಗೂ ಕೇರಳಗಳಲ್ಲಿ ಮಾತ್ರ ಸಕ್ರಿಯ ಸೋಂಕುಗಳು 50 ಸಾವಿರಕ್ಕಿಂತ ಹೆಚ್ಚಾಗಿವೆ.

ಕಳೆದ 24 ಗಂಟೆಗಳಲ್ಲಿ 44,281 ಸೋಂಕುಗಳು ಕಂಡು ಬಂದಿದ್ದರೆ, 50,326 ಜನರು ಗುಣಮುಖರಾಗಿದ್ದಾರೆ. ಸತತ 30 ದಿನಗಳಿಂದ ಚೇತರಿಸಿಕೊಳ್ಳುತ್ತಿರುವವರ ಸಂಖ್ಯೆ ಸೋಂಕಿತರಿಗಿಂತ ಹೆಚ್ಚಾಗಿದೆ.

## ನಗರದಲ್ಲಿ ಇಂದು

ಪಟಾಕಿ ವರ್ತಕರ ಮತ್ತು ಬಳಕೆದಾರರ ಸಂಘದ ಆಶ್ರಯದಲ್ಲಿ ಪಟಾಕಿ ಮಾರಾಟ ಮಳಿಗೆಗಳ ಉದ್ಘಾಟನಾ ಸಮಾರಂಭವು ಇಂದು ಮಧ್ಯಾಹ್ನ 12 ಕ್ಕೆ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿದೆ.

**AVAILABLE**
Low price Residential Rooms on Monthly Basis at Gandhi Cricle.
Wanted Night Room Boy
Contact :
99801 11370

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್ , ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**ಬೇಕಾಗಿದ್ದಾರೆ**
"ಮೆಡಿಹೌಸ್" ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : PUC Pass/ Fail/ Any Degree.
ಕಾವೇರಿ ಮೆಡಿಹೌಸ್ (ಪ್ರೈ)
ಚೇತನಾ ಹೋಟೆಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

## ಗೋಸ್ವಾಮಿಗೆ ಜಾಮೀನು

(1ನೇ ಪುಟದಿಂದ) ಒಳಗೊಂಡ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ರಾಜ್ಯ ಸರ್ಕಾರಗಳು ವ್ಯಕ್ತಿಗಳನ್ನು ಗುರಿಯಾಗಿಟ್ಟುಕೊಂಡ ಸಂದರ್ಭದಲ್ಲಿ ನಾಗರಿಕರ ಹಿತವನ್ನು ಸುಪ್ರೀಂ ಕೋರ್ಟ್ ರಕ್ಷಿಸಬೇಕಾಗುತ್ತದೆ ಎಂದು ತಿಳಿಸಿದೆ. ಗೋಸ್ವಾಮಿ ದಾಖಲಿಸಿದ್ದ ಜಾಮೀನು ಅರ್ಜಿಯನ್ನು ಬಾಂಬೆ ಹೈಕೋರ್ಟ್ ನಿರಾಕರಿಸಿದ್ದು ತಪ್ಪಾಗಿದೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ವ್ಯಕ್ತಿಯೋರ್ವ ಇನ್ನೊಬ್ಬ ವ್ಯಕ್ತಿಗೆ ಹಣ ನೀಡಲಿಲ್ಲ ಎಂಬುದು ಆತ್ಮಹತ್ಯೆಗೆ ಪ್ರಚೋದನೆ ಯಾಗುತ್ತದೆಯೇ? ಈ ರೀತಿಯ ಪ್ರಕರಣಗಳಲ್ಲಿ ಹೈಕೋರ್ಟ್ ಕ್ರಮ ತೆಗೆದುಕೊಳ್ಳದೇ ಹೋದರೆ ವೈಯಕ್ತಿಕ ಸ್ವಾತಂತ್ರ್ಯದ ಸಂಪೂರ್ಣ ನಾಶವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## ಆಗ್ನೇಯ ಕ್ಷೇತ್ರ : ಬಿಜೆಪಿ

(1ನೇ ಪುಟದಿಂದ) ಚುನಾವಣೆಯಲ್ಲಿ ಬಿಜೆಪಿ ಎಲ್ಲವನ್ನೂ ಬಾಚಿಕೊಂಡಂತಾಗಿದೆ. ವಿಧಾನ ಸಭೆಯ ಎರಡು ಸ್ಥಾನಗಳಿಗೆ ನಡೆದ ಉಪ ಚುನಾವಣೆಗಳಲ್ಲೂ ಬಿಜೆಪಿ ಜಯಭೇರಿ ಬಾರಿಸಿದೆ.

## ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಹರಪನಹಳ್ಳಿಯಲ್ಲಿ ಸಂಭ್ರಮಾಚರಣೆ



ಹರಪನಹಳ್ಳಿ,ನ.11- ರಾಜ್ಯದ ಶಿರಾ, ಆರ್.ಆರ್. ನಗರ ಸೇರಿದಂತೆ ದೇಶದ ವಿವಿಧೆಡೆ ನಡೆದ ಉಪ ಚುನಾವಣೆ ಹಾಗೂ ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಭಾರೀ ಜಯಭೇರಿ ಗಳಿಸಿದ್ದು, ತಾಲ್ಲೂಕಿನ ಬಿಜೆಪಿ ಕಾರ್ಯಕರ್ತರು ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತಕರ್ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ತಾಲ್ಲೂಕು ಬಿಜೆಪಿ ಮಹಿಳಾ ಘಟಕಾಧ್ಯಕ್ಷೆ ಟಿ. ಪದ್ಮಾವತಿ, ಪುರಸಭೆ ಸದಸ್ಯ ಎಸ್.ಕಿರಣಕುಮಾರ್, ತಾಲ್ಲೂಕು ಬಿಜೆಪಿ ಎಸ್.ಸಿ. ಘಟಕದ ಉಪಾಧ್ಯಕ್ಷ ಭಂಗಿ ಚಂದ್ರಪ್ಪ, ಮುಖಂಡರಾದ ಎಂ.ಪಿ. ನಾಯ್ಕ, ಬಾಗಳಿ ಕೊಟ್ರೇಶಪ್ಪ, ರಾಘವೇಂದ್ರ ಶ್ರೇಷ್ಠಿ, ಸಂತೋಷ್, ಮಲ್ಲೇಶ್, ಲಿಂಬ್ಯಾನಾಯ್ಕ್, ಬಿ.ವೈ. ವೆಂಕಟೇಶ್, ನಿರಂಜನ, ಮಾಬೂಸಾಬ್, ಸತ್ಯನಾರಾಯಣ ಹಾಗು ಇನ್ನಿತರರು ಇದ್ದರು.

## ರಾಣೇಬೆನ್ನೂರಿನಲ್ಲಿ ಬಿಜೆಪಿ ಸಂಭ್ರಮ



ರಾಣೇಬೆನ್ನೂರು, ನ.11- ಶಿರಾ ಹಾಗೂ ಆರ್.ಆರ್. ನಗರ ವಿಧಾನ ಸಭೆ ಉಪಚುನಾವಣೆ ಮತ್ತು ವಿಧಾನಪರಿಷತ್ ಚುನಾವಣೆಯಲ್ಲಿ ಜಯ ಗಳಿಸಿದೆ ಹಾಗೂ ಬಿಹಾರದಲ್ಲಿಯೂ ಸರ್ಕಾರ ರಚಿಸಿದ್ದು, ರಾಣೇಬೆನ್ನೂರಿನ ಬಿಜೆಪಿ ವತಿಯಿಂದ ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

ಪೋಸ್ಟ್ ಸರ್ಕಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖಂಡರುಗಳಾದ ಎ.ಬಿ. ಪಾಟೀಲ, ಎಸ್.ಎಸ್. ರಾಮಲಿಂಗಣ್ಣನವರ, ಕೆ.ವಿ. ಶ್ರೀನಿವಾಸ, ಪ್ರಕಾಶ ಪೂಜಾರ, ಬಸವರಾಜ ಕೇಲಗಾರ, ಪ್ರಕಾಶ ಹರಿಯಾಳದವರ, ಕೆ. ಶಿವಲಿಂಗಪ್ಪ ಬಸವರಾಜ ಹುಲ್ಲತ್ತಿ, ದೀಪಕ ಹರಪನಹಳ್ಳಿ ಇನ್ನಿತರರು ಭಾಗವಹಿಸಿದ್ದರು.

## ಆರು ಜನರಿಗೆ ಸಚಿವ ಸ್ಥಾನ ಸಾಧ್ಯತೆ

(1ನೇ ಪುಟದಿಂದ) ಚರ್ಚಿಸಿ ತಮಗೆ ಅನುಮತಿ ನೀಡಬೇಕೆಂದು ಕೋರಿದ್ದಾರೆ ಎನ್ನಲಾಗಿದೆ. ನಡ್ಡಾ ಅವರನ್ನು ಸಂಪರ್ಕಿಸಿದ ನಂತರ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರ ಜೊತೆಯೂ ಈ ಸಂಬಂಧ ಚರ್ಚೆ ಮಾಡಿದ್ದಲ್ಲದೆ ಅಶೋಕ್ ಗಸ್ತಿ ಅವರ ನಿಧನದಿಂದ ತೆರವಾಗಿರುವ ರಾಜ್ಯಸಭಾ ಸ್ಥಾನಕ್ಕೆ ಯಾರನ್ನು ಅಭ್ಯರ್ಥಿ ಮಾಡಬೇಕೆಂಬ ಬಗ್ಗೆಯೂ ಈ ನಾಯಕರು ಚರ್ಚೆ ಮಾಡಿದ್ದಾರೆ.

ಈ ಮಧ್ಯೆ ಜಲ ಸಂಪನ್ಮೂಲ ಸಚಿವ ಜಾರಕಿಹೊಳಿ ನಿವಾಸದಲ್ಲಿ ಒಂದಷ್ಟು ವಲಸಿಗರು ಮತ್ತು ಕೆಲವು ಶಾಸಕರು ಸಭೆ ಸೇರಿ ಮುಖ್ಯಮಂತ್ರಿ ಅವರ ಮೇಲೆ ಸಚಿವ ಸ್ಥಾನಕ್ಕಾಗಿ ಒತ್ತಡ ಹೇರಲು ತೀರ್ಮಾನಿಸಿದ್ದಾರೆ.

## ಕುಂಬಳೂರು ಹನುಮಪ್ಪನ ಕಾಣಿಕೆ ಹುಂಡಿಯಲ್ಲಿ 5.93 ಲಕ್ಷ ರೂ. ಸಂಗ್ರಹ



ಮಲೇಬೆನ್ನೂರು, ನ.11- ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ದೇವಸ್ಥಾನದಲ್ಲಿ ಶನಿವಾರ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರ ಸಮ್ಮುಖದಲ್ಲಿ ಕಾಣಿಕೆ ಹುಂಡಿಯನ್ನು ತೆರೆದು ಕಾಣಿಕೆ ಹಣವನ್ನು ಎಣಿಕೆ ಮಾಡಲಾಯಿತು.

2 ವರ್ಷಗಳ ನಂತರ ಕಾಣಿಕೆ ಹುಂಡಿ ತೆರೆದಿದ್ದರಿಂದ 5,93,416 ರೂ. ಕಾಣಿಕೆ ಸಂಗ್ರಹವಾಗಿದೆ ಎಂದು ಹುಂಡಿ ಎಣಿಕೆ ನಂತರ ಉಪ ತಹಶೀಲ್ದಾರ್ ಆರ್.ರವಿ ತಿಳಿಸಿದರು. ಮುಜರಾಯಿ ಶಿರಸ್ತೇದಾರ್ ನಟರಾಜ್, ಕಂದಾಯ ನಿರೀಕ್ಷಕ ಸಮೀರ್, ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀಧರಮೂರ್ತಿ, ಸೌಮ್ಯ, ಸಂಗೀತಾ, ಆನಂದತೀರ್ಥ, ಸುಭಾನಿ, ಮಂಜುಳಾ, ಶಿಲ್ಪ, ದೇವರಾಜ್ ಮತ್ತಿತರರು ಕಾಣಿಕೆ ಹುಂಡಿ ಎಣಿಕೆಯಲ್ಲಿ ಭಾಗವಹಿಸಿದ್ದರು.


॥ ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ॥

ದಾವಣಗೆರೆ ತಾಲ್ಲೂಕು ಕಬ್ಬೂರು ಗ್ರಾಮದ ವಾಸಿ
**ಗಂಗಜ್ಜರ ದಿ॥ ಕೆ.ಜಿ. ಹನುಮಂತಪ್ಪ ಹಾಗೂ ದಿ॥ ಕೆ.ಜಿ. ವೀರಭದ್ರಪ್ಪನವರ ಮಕ್ಕಳು ಮಾಡುವ ವಿಜ್ಞಾಪನೆಗಳು.**

ದಿ॥ 14-10-2020ನೇ ಬುಧವಾರ ಸಂಜೆ 7-15ಕ್ಕೆ ದಿ॥ ಕೆ.ಜಿ. ವೀರಭದ್ರಪ್ಪನವರ ದ್ವಿತೀಯ ಪುತ್ರ ಕೆ.ಜಿ. ಮಹಾದೇವಪ್ಪನವರ ಧರ್ಮಪತ್ನಿ **ಶ್ರೀಮತಿ ಕೆಂಚಮ್ಮನವರು** ಲಿಂಗೈಕ್ಯರಾಗಿರುತ್ತಾರೆ

ದಿ॥ 18-10-2020ನೇ ಭಾನುವಾರ ಬೆಳಿಗ್ಗೆ 6-30ಕ್ಕೆ ದಿ॥ ಕೆ.ಜಿ. ಹನುಮಂತಪ್ಪನವರ ದ್ವಿತೀಯ ಪುತ್ರ **ಶರಣ ಕೆ.ಜಿ. ಈಶಪ್ಪನವರು** ಲಿಂಗೈಕ್ಯರಾಗಿರುತ್ತಾರೆ





ಇವರುಗಳು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**" ಕೈಲಾಸ ಶಿವಗಣಾರಾಧನೆಯನ್ನು"**
ದಿ॥ 12-11-2020ನೇ ಗುರುವಾರ ಬೆಳಿಗ್ಗೆ 10-30 ಕ್ಕೆ ಕಬ್ಬೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಗಂಗಜ್ಜರ ದಿ॥ ಹನುಮಂತಪ್ಪ ಹಾಗೂ ದಿ॥ ವೀರಭದ್ರಪ್ಪನವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು- ಮಿತ್ರರು. ಕಬ್ಬೂರು ಗ್ರಾಮಸ್ಥರು. ಮೊ : 9880346311, 9980891883

# ಜನನ-ಮರಣ ನೋಂದಣಿ, ಇ-ಜನ್ಮ ತಂತ್ರಾಂಶ ನಿರ್ವಹಣೆ ಶಿಬಿರ



ದಾವಣಗೆರೆ, ನ.11- ಜನನ-ಮರಣ ನೋಂದಣಿ ನಿಯಮಗಳು ಹಾಗೂ ಇ-ಜನ್ಮ ತಂತ್ರಾಂಶ ನಿರ್ವಹಣೆ ಕುರಿತು ಜಿಲ್ಲಾಡಳಿತ ಭವನದಲ್ಲಿ ಇಂದು ಏರ್ಪಡಿಸಲಾಗಿದ್ದ ತರಬೇತಿ ಕಾರ್ಯಾಗಾರವನ್ನು ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ ಹಾಗೂ ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಉದ್ಘಾಟಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಅಪರ ಜಿಲ್ಲಾ ಜನನ-ಮರಣ ನೋಂದಣಾಧಿಕಾರಿ ವೈ.ಎಂ.ರಾಜೇಶ್ವರಿ ಮಾತನಾಡಿ, ಜನನ-ಮರಣ ನೋಂದಣಿಯು ಅತ್ಯಂತ ಮಹತ್ವದ ಕಾರ್ಯಕ್ರಮ ವಾಗಿದ್ದು, ಜಿಲ್ಲೆಯಲ್ಲಿ ಒಟ್ಟು 928 ಜನನ-ಮರಣ ನೋಂದಣಿ ಘಟಕಗಳು ಹಾಗೂ 114 ಉಪನೋಂದಣಿ ಘಟಕಗಳು ಸೇರಿದಂತೆ ಒಟ್ಟಾಗಿ 1042 ಜನನ-ಮರಣ ನೋಂದಣಿ ಘಟಕಗಳಿವೆ. ಜನನ-ಮರಣ ಘಟನೆಗಳು ಇ-ಜನ್ಮ ತಂತ್ರಾಂಶದಲ್ಲಿ ಯಶಸ್ವಿಯಾಗಿ ನೋಂದಣಿಯಾಗುತ್ತಿದ್ದು ಜನರಿಗೆ ಸಕಾಲದಲ್ಲಿ ಪ್ರಮಾಣ ಪತ್ರಗಳು ದೊರೆಯುತ್ತಿರುವುದು ಈ ತಂತ್ರಾಂಶದ ವಿಶೇಷತೆ ಎಂದರು.

ಇ-ಜನ್ಮ ನೋಂದಣಿ ಕಾರ್ಯದಿಂದ ದೇಶದ ಜನಸಂಖ್ಯೆ ಜಿಲ್ಲಾವಾರು ಜನನ ಪ್ರಮಾಣವನ್ನು ಅಂದಾಜಿಸಲು, ನವಜಾತ ಶಿಶು ಹಾಗೂ ತಾಯಿಯ ಯೋಗಕ್ಷೇಮ, ರೋಗ ನಿರೋಧಕ ಚುಚ್ಚುಮದ್ದು ಕಾರ್ಯಕ್ರಮಗಳಿಗೆ, ವಿವಾಹ ವಯಸ್ಸಿನ ಅಧ್ಯಯನ, ಲಿಂಗಾನುಪಾತ ಅಂದಾಜಿಸಲು ಹಾಗೂ ಇನ್ನಿತರೆ ಜನಗಣತಿಯ ಪ್ರಮುಖ ಅಂಕಿ, ಅಂಶಗಳನ್ನು ಪಡೆಯಲು ಹಾಗೂ ಯೋಜನೆಗಳನ್ನು ರೂಪಿಸಲು ನೋಂದಣಿ ಕಾರ್ಯ ಅವಶ್ಯಕವಾಗಿದೆ ಎಂದು ಅವರು ತಿಳಿಸಿದರು.

ಸಹಾಯಕ ಸಾಂಖ್ಯಿಕ ಅಧಿಕಾರಿ ವಿಜಯ್ ಬಡಿಗೇರ್ ಅವರು ಮಾತನಾಡಿದರು. ಪಾಲಿಕೆಯ ಜನನ-ಮರಣ ನೋಂದಣಾಧಿಕಾರಿ ಕೆ.ಎಲ್. ಧರಣೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಶಂಕರ್ ವಿಹಾರ್‌ನ ಪಾರ್ಕ್ ಸ್ವಚ್ಛತೆ



ದಾವಣಗೆರೆ, ನ.11- ನಗರದ 15ನೇ ವಾರ್ಡಿನ ಶಂಕರ್ ವಿಹಾರ್ ಬಡಾವಣೆಯ 2ನೇ ಹಂತದಲ್ಲಿ ಸುಮಾರು ವರ್ಷಗಳಿಂದ ಉದ್ಯಾನವನವು ಗಿಡ, ಕೊಂಪೆಗಳು ಬೆಳೆದು ಉದ್ಯಾನವನ ಕಾಣದಂತಾಗಿತ್ತು. ಈ ಉದ್ಯಾನವನವನ್ನು ಸ್ವಚ್ಛಗೊಳಿಸಬೇಕು. ವಾಯು ವಿಹಾರ, ವ್ಯಾಯಾಮ ಮಾಡಲು ಸಾರ್ವಜನಿಕರಿಗೆ ಪಾರ್ಕ್‌ನ ಅವಶ್ಯಕತೆ ಇದ್ದು, ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರಿಗೆ ಇಲ್ಲಿನ ನಾಗರಿಕರು ಮನವಿ ಸಲ್ಲಿಸಿದ್ದರು. ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದ ಆಶಾ ಉಮೇಶ್, ಕೂಡಲೇ ಜೆಸಿಬಿಯಿಂದ ಪಾರ್ಕ್‌ನ ನಿವೇಶನವನ್ನು ಸ್ವಚ್ಛಗೊಳಿಸಿದರು. ನಾಗರಿಕರ ಬೇಡಿಕೆಗಳಿಗೆ ಸ್ಪಂದಿಸಿದ ಆಶಾ ಉಮೇಶ್ ಅವರಿಗೆ ವಾರ್ಡಿನ ನಾಗರಿಕರು ಕೃತಜ್ಞತೆ ಸಲ್ಲಿಸಿದ್ದಾರೆ. ಈ ಭಾಗದ ಮುಖಂಡರಾದ ಉಮಾಶಂಕರ್, ಗೌಡರ್, ವಿನಯ್, ವೀರಯ್ಯಸ್ವಾಮಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ವೀರೇಶ್ವರ ಪುಣ್ಯಾಶ್ರಮ ಶಿಲಾಮಂಟಪಕ್ಕೆ ಬಕ್ಕೇಶ್ವರ ದೇವಸ್ಥಾನ ಸಮಿತಿಯಿಂದ ದೇಣಿಗೆ



ದಾವಣಗೆರೆ, ನ.11- ನಗರಕ್ಕೆ ಸಮೀಪದ ಬಾಡಾ ಕ್ರಾಸ್ ಬಳಿಯ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಿರ್ಮಾಣಗೊಳ್ಳುತ್ತಿರುವ ಶಿಲಾಮಂಟಪಕ್ಕೆ ನಗರದ ಶ್ರೀ ಬಕ್ಕೇಶ್ವರ ದೇವಸ್ಥಾನ ಸಮಿತಿಯಿಂದ ದೇಣಿಗೆ ನೀಡಲಾಗಿದೆ.

ಶ್ರೀ ಬಕ್ಕೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷ ಶಿವಾನಂದಪ್ಪ, ಕಾರ್ಯದರ್ಶಿ ಅಥಣಿ ವೀರಣ್ಣ ಅವರುಗಳು ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಶಿವಮೂರ್ತಿ ಸ್ವಾಮಿ ಅವರಿಗೆ ದೇಣಿಗೆಯ ಚೆಕ್ ನೀಡಿದರು.

ಸುಮಾರು ಮೂರೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಶಿಲಾಮಂಟಪಕ್ಕೆ ದಾನಿಗಳು ಉದಾರವಾಗಿ ದಾನ ನೀಡುತ್ತಿದ್ದಾರೆ ಎಂದು ಶಿವಮೂರ್ತಿ ಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದರು.

## ರುದ್ರಪ್ಪ ಲಮಾಣಿ ವಿರುದ್ಧ ಹೇಳಿಕೆ : ನೆಹರೂ ಓಲೇಕಾರ ಕ್ಷಮೆಗೆ ಆಗ್ರಹ

ದಾವಣಗೆರೆ, ನ.11- ಮಾಜಿ ಸಚಿವ ರುದ್ರಪ್ಪ ಲಮಾಣಿ ಅವರು ಮಹಿಳೆಯರನ್ನು ಮಾರಾಟ ಮಾಡುತ್ತಿದ್ದರು ಎಂದು ಹೇಳಿಕೆ ನೀಡಿರುವ ಶಾಸಕ ನೆಹರು ಓಲೇಕಾರ ಕೂಡಲೇ ಬಂಜಾರ ಸಮಾಜದ ಕ್ಷಮೆ ಕೇಳಬೇಕು ಎಂದು ಸಮಾಜದ ಮುಖಂಡ ನಾಗರಾಜ ನಾಯ್ಕ ಸೋಮ್ಲಾಪುರ ಒತ್ತಾಯಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರುದ್ರಪ್ಪ ಲಮಾಣಿ ಮಹಿಳೆಯರನ್ನು ಮಾರಾಟ ಮಾಡಿರುವ ಬಗ್ಗೆ ನೆಹರು ಓಲೇಕಾರ ಅವರು ದಾಖಲೆಗಳಿದ್ದರೆ ತೋರಿಸಲಿ. ಆಗ ನಾವೇ ಸಮಾಜದಿಂದ ರುದ್ರಪ್ಪ ಲಮಾಣಿ ಅವರಿಗೆ ಬಹಿಷ್ಕಾರ ಹಾಕುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಸವರಾಜನಾಯ್ಕ, ಶೀತಲ್, ರವಿನಾಯ್ಕ ತೋಳಹುಣಸೆ, ನಂಜಾನಾಯ್ಕ ಉಪಸ್ಥಿತರಿದ್ದರು.

## ತಾಲ್ಲೂಕು ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಆಚಾರ್ಯ ಬಿ.ಎಂ. ಶ್ರೀ' ಅವರ ಸಾಹಿತ್ಯ ಕುರಿತಂತೆ ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎಸ್. ಹರಿಶಂಕರ್ ಅವರು ಮಾತನಾಡುವರು.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzF-m4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಉತ್ತೇಜನಕ್ಕೆ 2 ಲಕ್ಷ ಕೋಟಿ

**(1ನೇ ಪುಟದಿಂದ)** ಆಹಾರ ಉತ್ಪನ್ನ, ಸೌರಶಕ್ತಿ ಹಾಗೂ ಸೆಲ್ ಬ್ಯಾಟರಿ ವಲಯಗಳಿಗೆ ಉತ್ತೇಜನ ನೀಡಲಾಗುವುದು ಎಂದು ತಿಳಿಸಿದ್ದಾರೆ.

## ನಿಜ ದೀಪಾವಳಿ

ನಮ್ಮ ದುರಾಸೆಗಳಿಗಿಲ್ಲದೆ ಅಂಕುಶ
ಕಾಡಿವೆ ನಮಗವೆ 'ನರಕ ಚತುರ್ದಶಿ',
ಅಂಟಿವೆಯೆಂದರಿಯುವುದೇ 'ಎಣ್ಣೆ ಶಾಸ್ತ್ರ'
ಅದ ತೊಳೆಯುವುದೇ 'ಸ್ನಾನದ ಪಾತ್ರ;

ಎಷ್ಟೇ ಆಸ್ತಿ ಗಳಿಸಿದರೇನು, ಬೆಳೆಸಿದರೇನು
ಎಲ್ಲ ಮೆಟ್ಟುವುದು 'ವಾಮನ ಪಾದ'ವು ತಾನು,
ಎಂಬ ನೀತಿ ಹೇಳುತಿದೆ 'ಬಲಿಪಾಡ್ಯಮಿ'
ದುರಾಸೆ ಬಿಟ್ಟು, ಬದುಕಿರಿ ಸ್ವಾಮಿ,

ಅಕ್ರಮ ಗಳಿಕೆ, ತೆರಿಗೆ ವಂಚನೆ, ಲಂಚದ ದುಡಿಮೆ
ದೀಪ ಹಚ್ಚಿದರೂ ಪಾಪ ಆಗದು ಕಡಿಮೆ,
ಸರಳ ಜೀವನ, ಸತ್ಯದಿ ಬಾಳಿ
ಅದಕೆನ್ನುವರು 'ನಿಜ ದೀಪಾವಳಿ'

**-ಹೆಚ್.ಬಿ.ಮಂಜುನಾಥ್**, ಹಿರಿಯ ಪತ್ರಕರ್ತ

## ಸತ್ಯದ ಗೆಲುವಲ್ಲ, ಮೋಸದ ಜಯ



ದಾವಣಗೆರೆ, ನ. 11- ಹಣ ಬಲ, ಅಧಿಕಾರ ದುರ್ಬಳಕೆಯಿಂದ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ. ಶಿವಗಂಗಾ ಟೀಕಿಸಿದ್ದಾರೆ. ಆರ್.ಆರ್.ನಗರ ಮತ್ತು ಶಿರಾ ಉಪ ಚುನಾವಣೆಯಲ್ಲಿ ಹಳ್ಳಿ ಹಳ್ಳಿಗಳಲ್ಲೂ ಬೇರೆ-ಬೇರೆ ಜಿಲ್ಲೆಯ ಬಿಜೆಪಿ ಮುಖಂಡರು ಹಣದ ಹೊಳೆ ಹರಿಸಿ, ಆ ಮೂಲಕ ಗೆಲುವು ಸಾಧಿಸಿದ್ದಾರೆ. ಇದು ಸತ್ಯದ ಗೆಲುವು ಅಲ್ಲ, ಮೋಸದ ಜಯ ಎಂದಿದ್ದಾರೆ.

ಹಾಲಿ, ಮಾಜಿ ಸಚಿವರು, ಶಾಸಕರ ದಂಡೇ ಚುನಾವಣೆಯಲ್ಲಿ ನಿಂತು ಹಣ, ಹೆಂಡ ಹಂಚಿ ಮತದಾರರನ್ನು ದಿಕ್ಕು ತಪ್ಪಿಸಿದೆ. ಈ ಕಾರಣ ಬಿಜೆಪಿ ಗೆದ್ದಿದೆಯೋ ವಿನಃ ಬೇರೆ ಯಾವುದೇ ಬಿಜೆಪಿ ಪರ ಅಲೆ ಇಲ್ಲ ಎಂದು ಅವರು ಹೇಳಿಕೆಯಲ್ಲಿ ಟೀಕಿಸಿದ್ದಾರೆ.

## ತಹಶೀಲ್ದಾರ್‌ಗೆ ನಿಂದಿಸಿದ ಮಹಿಳೆ

**(1ನೇ ಪುಟದಿಂದ)** ಮಹಿಳೆ ತಹಶೀಲ್ದಾರ್ ಗಿರೀಶ್ ಗೆ ಸರ್ ಎಂಬುದಾಗಿ ಗೌರವ ತೋರುತ್ತಾ, ಅಷ್ಟೊಂದು ದಂಡ ಕಟ್ಟಲು ಸಾಧ್ಯವಿಲ್ಲ ಎಂದು ನಿರಾಕರಿಸಿದ್ದಾಳೆ. ಆದರೂ ಸಹ ಬಿಡದೇ ಮಹಿಳೆಗೆ ದಂಡ ವಿಧಿಸಿ, ಮಾಸ್ಕ್ ಮಹತ್ವದ ಜೊತೆಗೆ ವರ್ತನೆಯ ಬಗ್ಗೆ ತಿಳಿ ಹೇಳಿ ಕಳಿಸಲಾಗಿದೆ.

ಕಾಳಿಕಾದೇವಿ ರಸ್ತೆಯಲ್ಲಿರುವ ಬಿ. ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಜವಳಿ ಅಂಗಡಿ ಸೇರಿದಂತೆ ಹಲವು ಜವಳಿ ಅಂಗಡಿಗಳ ಮೇಲೆ ತಹಶೀಲ್ದಾರ್ ಗಿರೀಶ್ ನೇತೃತ್ವದ ತಂಡ ದಾಳಿ ನಡೆಸಿದ್ದು, ಮಾಸ್ಕ್ ಇಲ್ಲದೆ ಓಡಾಡುತ್ತಿದ್ದವರಿಗೆ ದಂಡ ವಿಧಿಸಿದರು.

ನಂತರ ಬಟ್ಟೆ ಅಂಗಡಿ ಮೇಲೆ ದಾಳಿ ನಡೆಸಿದ ತಹಶೀಲ್ದಾರ್ ಗಿರೀಶ್ ನೇತೃತ್ವದ ತಂಡವು ಖರೀದಿಯಲ್ಲಿ ತೊಡಗಿದ್ದ ಜನರಿಗೆ ಮಾಸ್ಕ್ ಧರಿಸಲು, ಸಾಮಾಜಿಕ ಅಂತರ ಕಾಯ್ದುಕೊಳ್ಳಲು ತಾಕೀತು ಮಾಡಿದರು. ಅನೇಕ ಬಟ್ಟೆ ಅಂಗಡಿಗಳೂ ಸೇರಿದಂತೆ ಬಹುತೇಕ ಕಡೆ ಸಾಮಾಜಿಕ ಅಂತರ ಕಾಯ್ದುಕೊಳ್ಳದಿರುವುದು ಕಂಡು ಬಂದಿತು. ಅಂತಹವರಿಗೆ ಸ್ಥಳದಲ್ಲೇ ದಂಡ ವಿಧಿಸ ಲಾಗಿದೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಜವಳಿ ಅಂಗಡಿಯಲ್ಲಿ ಮಾಸ್ಕ್ ಇಲ್ಲದೆ ಬಟ್ಟೆ ಖರೀದಿ ಮಾಡುತ್ತಿದ್ದ ಜನರು ತಹಶೀಲ್ದಾರ್ ಗಿರೀಶ್ ಹಾಗೂ ಪೊಲೀಸರು ದಾಳಿ ನಡೆಸುತ್ತಿದ್ದಂತೆ ವೇಲು, ಸೀರೆ ಸೆರಗು, ಕರ್ಚೀಫ್ ಹಾಗೂ ಜೇಬುಗಳಿಂದ ಮಾಸ್ಕ್ ತೆಗೆದು ಹಾಕಿಕೊಂಡರು.

ಕೋವಿಡ್ ನಿಯಮ ಪಾಲನೆ ಮಾಡುವಂತೆ ಅಂಗಡಿ ಮಾಲೀಕರಿಗೆ ಸೂಚನೆ ನೀಡಿದರು. ಜವಳಿ ಅಂಗಡಿಯ ಸಿಬ್ಬಂದಿಗೆ ಕೋವಿಡ್ ಟೆಸ್ಟ್ ಮಾಡಿಸಲು ಕ್ಯಾಂಪ್ ಕೂಡ ಹಾಕಿಸಿದ್ದರು.

## ಪರಿಶಿಷ್ಟರ ಮೇಲಿನ ದೌರ್ಜನ್ಯಕ್ಕೆ ಶಿಕ್ಷೆ ಹೆಚ್ಚಾಗಲಿ

**(1ನೇ ಪುಟದಿಂದ)** ವಹಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಜಿಲ್ಲಾ ಮತ್ತು ಉಪ ವಿಭಾಗೀಯ ಮಟ್ಟದಲ್ಲಿ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಕಡ್ಡಾಯವಾಗಿ ನಡೆಸಿ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ವಹಿಸುವಂತೆಯೂ ಮುಖ್ಯಮಂತ್ರಿಗಳು ಸೂಚಿಸಿದರು.

## ಕುಣೆಬೆಳಕೆರೆ ದೇವೇಂದ್ರಪ್ಪ ದೇಣಿಗೆ



ಮಲೇಬೆನ್ನೂರು, ನ.11- ಕೊಂಡಜ್ಜಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ ಅವರು 25,000 ರೂ.ಗಳನ್ನು ದೇವಸ್ಥಾನ ಕಮಿಟಿಗೆ ದೇಣಿಗೆಯಾಗಿ ನೀಡಿದ್ದಾರೆ.

## ಹರಪನಹಳ್ಳಿ : ಡಿಪ್ಲೋಮಾಕ್ಕೆ ನೇರ ಪ್ರವೇಶ

ಹರಪನಹಳ್ಳಿ, ನ. 11- ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿ ಗಳಿಗೆ ಮತ್ತು ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ ಸಂಸ್ಥೆಯಲ್ಲಿ ಎಲ್ಲಾ ವಿಭಾಗಗಳಲ್ಲಿ ಖಾಲಿ ಉಳಿದಿರುವ ಪ್ರಥಮ ವರ್ಷದ ಡಿಪ್ಲೋಮಾ ಸೀಟುಗಳಿಗೆ, ಆಯಾ ದಿನವೇ ನೇರ ಪ್ರವೇಶದ ಮೂಲಕ ದಾಖಲಾತಿ ಮಾಡಿಕೊಳ್ಳಲಾಗುವುದು. ವಿವರಕ ದೂರವಾಣಿ : 9844197172, 9902482350, 8880932400 ನ್ನು ಸಂಪರ್ಕಿಸಬಹುದೆಂದು ಸಂಸ್ಥೆಯ ಪ್ರಾಚಾರ್ಯರಾದ ಎಂ.ಎಸ್.ದೇವರಾಜ್ ತಿಳಿಸಿದ್ದಾರೆ.

## ರಷ್ಯಾದ ಸ್ಪುಟ್ನಿಕ್ ಲಸಿಕೆ ಪರಿಣಾಮಕಾರಿ

**(1ನೇ ಪುಟದಿಂದ)** ಸೇವಕರಲ್ಲಿ ಕೊರೊನಾ ಲಸಿಕೆ ನೀಡಿದ ನಂತರ 21 ದಿನ ಪರೀಕ್ಷೆ ನಡೆಸಿ ಈ ವರದಿ ರೂಪಿಸಲಾಗಿದೆ.

ಸ್ಪುಟ್ನಿಕ್ 5 ಲಸಿಕೆಯನ್ನು ಭಾರತದಲ್ಲಿ ಉತ್ಪಾದಿಸಿ ವಿತರಿಸಲು ಡಾ. ರೆಡ್ಡೀಸ್ ಹಾಗೂ ರಷ್ಯನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ ಫಂಡ್‌ಗಳು ಕಳೆದ ಸೆಪ್ಟೆಂಬರ್ ನಲ್ಲಿ ಒಪ್ಪಂದ ಮಾಡಿಕೊಂಡಿ ದ್ದವು. ಈ ಒಪ್ಪಂದದ ಮೂಲಕ ಭಾರತಕ್ಕೆ 10 ಕೋಟಿ ಲಸಿಕೆ ಯನ್ನು ಪೂರೈಸಲು ನಿರ್ಧರಿಸಲಾಗಿದೆ.


**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.**
ಆಡಳಿತ ಕಛೇರಿ, ನಂ.120,ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577001

**ಮಾನ್ಯ ಸದಸ್ಯರ ಗಮನಕ್ಕೆ**

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್-19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಪ್ರಯುಕ್ತ ಬ್ಯಾಂಕಿನ 2019-20ನೇ ಸಾಲಿನ 51ನೇ ವಾರ್ಷಿಕ ಮಹಾಸಭೆಯನ್ನು ಸರ್ವ ಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೀಟಿಂಗ್ ಮೂಲಕ ನಡೆಸಲು ಆಡಳಿತ ಮಂಡಲಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಈ ಮಧ್ಯೆ ರಾಜ್ಯ ಸರ್ಕಾರಕ್ಕೆ ದತ್ತವಾದ ಅಧಿಕಾರದ ಮೂಲಕ ವಿಪತ್ತು ನಿರ್ವಹಣೆ ಅಧಿನಿಯಮ 2005 ರಡಿಯಲ್ಲಿ ಹೊರಡಿಸಿದ ಆದೇಶ ಸಂಖ್ಯೆ ಆರ್.ಡಿ. 158. ಟಿ.ಎನ್.ಆರ್. 2020., ದಿನಾಂಕ 01-10-2020ರ ಮಾರ್ಗಸೂಚಿಗೆ ಒಳಪಟ್ಟು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಹಕಾರ ಸಂಘಗಳ ಸರ್ವ ಸದಸ್ಯರ ಸಭೆಯನ್ನು ದಿನಾಂಕ 13-12-2020 ರಂದು ನಡೆಸಲು ತೀರ್ಮಾನಿಸಿದೆ. ಆದ್ದರಿಂದ ಮಾನ್ಯ ಸದಸ್ಯ ಬಾಂಧವರು ತಮ್ಮ ದೂರವಾಣಿ ಸಂಖ್ಯೆಯನ್ನು ಬ್ಯಾಂಕಿನ ಉಳಿತಾಯ/ಚಾಲ್ತಿ ಖಾತೆಗಳಲ್ಲಿ ನೊಂದಾಯಿಸಿಕೊಳ್ಳಲು ವಿನಂತಿ. ಬ್ಯಾಂಕ್ ವಾರ್ಷಿಕ ಮಹಾಸಭೆಯ ಪೂರ್ವದಲ್ಲಿ ಎಸ್.ಎಂ.ಎಸ್. ಮೂಲಕ ನೀಡುವ ಸಾಂಕೇತಿಕ ಸಂಖ್ಯೆಯ ಮೂಲಕ ತಾವುಗಳು ಅಂತರ್ಜಾಲದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ವಿನಂತಿಸಲಾಗಿದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ನಿಮ್ಮ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.

ಸಹಿ/- ಜಿ.ವಿ. ಶಿವಶಂಕರ್, ಪ್ರಧಾನ ವ್ಯವಸ್ಥಾಪಕರು
ಸಹಿ/- ಡಾ. ಶಾಮನೂರು ಶಿವಶಂಕರಪ್ಪ, ಅಧ್ಯಕ್ಷರು


# ಸಾಂಸ್ಕೃತಿಕ ಸಂಘಗಳಿಗೆ ಸಹಾಯ ಧನ ನೀಡಲು ಒತ್ತಾಯ

ದಾವಣಗೆರೆ, ನ.11- ನಾಡಿನ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಧನ ಸಹಾಯ ನೀಡುವಂತೆ ಹಾಗೂ ಜಿಲ್ಲಾಡಳಿತಕ್ಕೆ ಪ್ರಾಯೋಜನೆ ನೀಡಲು ಸೂಚನೆ ನೀಡುವಂತೆ ಹವ್ಯಾಸಿ ಗ್ರಾಮೀಣ ವಿವಿಧ ಕಲಾ ಪ್ರಕಾರಗಳ ಕಲಾವಿದರ ಒಕ್ಕೂಟದ ಜಿಲ್ಲಾ ಘಟಕ ಒತ್ತಾಯಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ಎನ್.ಎಸ್. ರಾಜು, ಕಳೆದ ಎರಡು ವರ್ಷಗಳಿಂದ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದ ಧನ ಸಹಾಯವನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಕಲಾವಿದರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಕೂಡಲೇ ಧನ ಸಹಾಯ ನೀಡಬೇಕು ಎಂದು ಹೇಳಿದರು.

ಕಲಾವಿದರು ನಾಡಿನ ಸಾಂಸ್ಕೃತಿಕ ರಾಯಭಾರಿಗಳು. ಇಂತಹ ಸಂಸ್ಕೃತಿಯ ಉಳಿವಿಗೆ ಪ್ರಯತ್ನಿಸುವ ಸಾಂಸ್ಕೃತಿಕ ಸಂಘ-ಸಂಸ್ಥೆಗಳು ಅನುದಾನವಿಲ್ಲದೆ ಸೊರಗಿ ಹೋಗಿವೆ. ಇದರಿಂದ ಸ್ಥಳೀಯ ಇಲಾಖೆಯಿಂದ ನೂರಾರು ಕಲಾ ವಿದರಿಗೆ ಸಿಗುವ ಪ್ರಯೋಜನೆ ಇಲ್ಲವಾಗಿದೆ ಎಂದರು.

ಕೋವಿಡ್ ಕಾರಣದಿಂದ ಸಾಂಸ್ಕೃತಿಕ ಸಂಘ-ಸಂಸ್ಥೆಗಳು, ವೃತ್ತಿ ರಂಗಭೂಮಿ, ಜಾನಪದ, ಬಯಲಾಟ ಸೇರಿದಂತೆ ವಿವಿಧ ಬಗೆಯ ಕಲಾವಿದರು ಕುಗ್ಗಿ ಹೋಗಿದ್ದಾರೆ. ಇದೀಗ ಕೊರೊನಾ ಸೋಂಕು ಕಡಿಮೆಯಾಗಿದ್ದು ಸರ್ಕಾರವು ಸರಳವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

**ಸಹಾಯಧನ ಹೆಚ್ಚಳಕ್ಕೆ ಮನವಿ:** ನಾಟಕ ಪ್ರದರ್ಶನಕ್ಕೆ ಸರ್ಕಾರ 35 ಸಾವಿರ ರೂ. ನೀಡುತ್ತಿದೆ. ಈ ಹಣದಿಂದ ನಾಟಕ ಪ್ರದರ್ಶನದ ವೆಚ್ಚ ಭರಿಸುವುದು ಕಷ್ಟ. ಆದ್ದರಿಂದ ಕನಿಷ್ಟ 60 ಸಾವಿರ ಹಾಗೂ ಕಲಾ ತಂಡಗಳಿಗೆ ನೀಡುತ್ತಿದ್ದ 20 ಸಾವಿರ ರೂ.ಗಳ ಬದಲಾಗಿ 30 ಸಾವಿರ ರೂ.ಗಳನ್ನು ಹೆಚ್ಚಳ ಮಾಡಿ ನೀಡುವಂತೆ ಅವರು ಒತ್ತಾಯಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಕಲಾವಿದರುಗಳಾದ ಹೆಚ್.ಮೆಹಬೂಬ್ ಅಲಿ, ಬಿ.ಹನುಮಂತಾಚಾರಿ, ಬಿ.ಇ. ತಿಪ್ಪೇಸ್ವಾಮಿ, ಬಲ್ಲೂರು ಮಂಜಪ್ಪ, ಜಿ.ಮೂಗಬಸಪ್ಪ ಉಪಸ್ಥಿತರಿದ್ದರು.

## ರಂಗಭೂಮಿಯ ರಾಜ್ಯ ಪ್ರಶಸ್ತಿ ಜಿಲ್ಲೆಯ ಕೈ ತಪ್ಪಿದೆ

ಹರಪನಹಳ್ಳಿ ತಾಲ್ಲೂಕು ಬಾಗಳಿಯ ಷಡಾಕ್ಷರಪ್ಪ ದಾವಣಗೆರೆಯವರಲ್ಲ. ಮಗಳ ಮನೆ ವಿಳಾಸ ನೀಡಿ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ಇದರಿಂದಾಗಿ ದಾವಣಗೆರೆ ಕಲಾವಿದರಿಗೆ ಅನ್ಯಾಯವಾಗಿದೆ ಎಂದು ಜಗಳೂರು ತಾಲ್ಲೂಕಿನ ಹಿರಿಯ ಕಲಾವಿದ ಜಿ.ಮೂಗಬಸಪ್ಪ ಪತ್ರಿಕಾಗೋಷ್ಠಿಯಲ್ಲಿ ಇಂದು ಆರೋಪಿಸಿದರು.

76 ವರ್ಷ ವಯಸ್ಸಿನ ನಾನು ಕಳೆದ 50 ವರ್ಷಗಳಿಂದ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ್ದೇನೆ. ರಂಗಭೂಮಿ ನಟನಾಗಿ, ನಿರ್ದೇಶಕನಾಗಿ, ಸಂಗೀತ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ ನನ್ನೊಂದಿಗೆ ಕೆಲ ಹಿರಿಯ ಕಲಾವಿದರು ಪ್ರಶಸ್ತಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಷಡಾಕ್ಷರಪ್ಪ ದಾವಣಗೆರೆ ವಾಸಿ ಎಂದು ವಿಳಾಸ ನೀಡಿ ದಾವಣಗೆರೆ ಕಲಾವಿದರಿಗೆ ಸಿಗಬೇಕಾದ ಪ್ರಶಸ್ತಿ ಪಡೆದಿದ್ದಾರೆ ಎಂದು ದೂರಿದರು.

## ಶಿವಕುಮಾರ್ ನೇಮಕ



ದಾವಣಗೆರೆ,ನ.11- ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಸಂಚಾಲಕರಾಗಿ ಕೊರಟಿಕೆರೆ ಶಿವಕುಮಾರ್ ನೇಮಕಗೊಂಡಿದ್ದಾರೆ.

## ಬರುತಿದೆ ದೀಪಾವಳಿ

ಬರುತಿದೆ ಬರುತಿದೆ ದೀಪಾವಳಿ
ಹರುಷವ ತುಂಬಲಿ ದೀಪಾವಳಿ
ಪರಿಪರಿ ನೋವಲಿ ಬೆಂದಿಹ ಜಗಕೆ
ಪರಮಾನಂದದ ಸುಖ ನೀಡಲಿ

ನರಕಾಸುರನ ಕೊಂದಂಥ ಕೃಷ್ಣನು
ಕೊರೊನಾ ಅಣುವ ಸಂಹರಿಸಲಿ
ಅರಿವಿನ ಜ್ಯೋತಿಯ ಬೆಳಗಿಸಲಿ
ಪರಮ ಕಷ್ಟದಿಂದ ಮೇಲೆತ್ತಲಿ

ಬಲಿಯನು ತುಳಿದಂಥ ವಾಮನನು
ಇಲ್ಲಿಹ ರೋಗವ ಓಡಿಸಲಿ
ತಲ್ಲಣಿಸುತ್ತಿಹ ಮಾನವನನ್ನು
ಉಲ್ಲಾಸ ಶಿಖರಕೆ ಏರಿಸಲಿ

ಲಕ್ಷ್ಮೀದೇವಿಯು ಸೌಭಾಗ್ಯ ಕೊಡಲಿ
ರಕ್ಷಿಸಿ ಸಿರಿಹರಿ ಕಾಪಾಡಲಿ
ಸೂಕ್ಷ್ಮಾಣುವಿನ ಶಕ್ತಿ ಕುಂದಲಿ
ಪಕ್ಷಿಯಂತೆ ಮನ ಹಾರಾಡಲಿ

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್


**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಅಂಡ್ ಹಾಸ್ಪಿಟಲ್**
ಸಕ್ಕರೆ ಖಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರ
2ನೇ ಮುಖ್ಯರಸ್ತೆ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002.
36ನೇ ವಿಶ್ವ ಮಧುಮೇಹ ದಿನಾಚರಣೆ -2020
ಸಕ್ಕರೆ ಖಾಯಿಲೆ ಮತ್ತು ಶುಶ್ರೂಷಕರು
ದಿನಾಂಕ 14.11.2020, ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ.
facebook link
Virtual Live Meeting :
https://www.facebook.com/alurhospital
https://youtube.come/channel/UCahb3fk06S_A1XG3RGck3MA

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**
# 477/2, ಪ್ರಿಯಾ ಕಾಂಪ್ಲೆಕ್ಸ್, 16 ನೇ ಕ್ರಾಸ್, ಕೆಟಿಜೆ ನಗರ, ಹದಡಿ ಮುಖ್ಯ ರಸ್ತೆ, ದಾವಣಗೆರೆ. ಫೋ. : 08192-233666
ಶಾಖೆ : ಹಿರೇಕಲ್ಮಠ ಆವರಣ, ಹೊನ್ನಾಳಿ ಫೋ. : 08188 251666
**ಪ್ರಕಟಣೆ**
ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಇದರ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,
**2020-21 ರಿಂದ 2024-25ನೇ ಸಾಲಿನ ಅವಧಿಯ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ**
ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಚುನಾವಣೆಗೆ ಅರ್ಹ, ಅನರ್ಹ ಮತ್ತು ಸುಸ್ತಿದಾರರ ಪಟ್ಟಿಗಳನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಅನರ್ಹ ಮತ್ತು ಸುಸ್ತಿದಾರರ ಪಟ್ಟಿಯ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ, ದಿನಾಂಕ 09.12.2020 ರೊಳಗಾಗಿ ಅಗತ್ಯ ದಾಖಲೆಗಳನ್ನು ಸಹಕಾರಿಯ ಕಛೇರಿಗೆ ಸಲ್ಲಿಸಲು ಕೋರಿದೆ.
ಸ್ಥಳ : ದಾವಣಗೆರೆ.
ದಿನಾಂಕ : 10.11.2020
ಸಹಿ/- ಕವಿತಾ ಜೆ.
ಕಾರ್ಯದರ್ಶಿ, ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ.

ಪ್ರತಿ ಒಂದು ಸಾವಿರ ಬೆಲೆಯ ಖರೀದಿಯ ಮೇಲೆ
ಉಚಿತ ಉಚಿತ ಉಚಿತ
✦ ಸಕ್ಕರೆ – 1 ಕೆಜಿ
✦ ಗೋಧಿ ಹಿಟ್ಟು – 1 ಕೆಜಿ
✦ ಅವಲಕ್ಕಿ – 1 ಕೆಜಿ
✦ ಬನ್ಸಿ ರವೆ – 1 ಕೆಜಿ
ಫ್ರೀ ಹೋಂ ಡೆಲಿವರಿ
ವಿಶಾಲವಾದ ಪಾರ್ಕಿಂಗ್
ನಮ್ಮೆಲ್ಲಾ ಗ್ರಾಹಕರಿಗೆ ದೀಪಾವಳಿ ಹಬ್ಬದ ಕೊಡುಗೆ
**ಶಾಮನೂರು ಶಾಪೆ**
ಸಿದ್ದವೀರಪ್ಪ ಬಡಾವಣೆ, 2 ನೇ ಕ್ರಾಸ್, ಶಾಮನೂರು ರೋಡ್, ದಾವಣಗೆರೆ.
☎ : 08192-223332

ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
**ಹಸಿರು ಪಟಾಕಿಗಳ ಮಾರಾಟ!**
* ಹೋಲ್‌ಸೇಲ್ ದರದಲ್ಲಿ ಮಾರಾಟ * 500 ರೂ. ಮೇಲ್ಪಟ್ಟ ಖರೀದಿಗೆ ಮಾತ್ರ ಅವಕಾಶ
* ಪ್ಯಾಕೆಟ್‌ಗಳ ಸೇಲ್ ಮಾತ್ರ, ಲೂಸ್ ಕೊಡುವುದಿಲ್ಲ
* ಕೋವಿಡ್ ಇರುವುದರಿಂದ ಮಾಸ್ಕ್ ಕಡ್ಡಾಯ
* ಬೆಳಗ್ಗೆ 9 ರಿಂದ ರಾತ್ರಿ 9 ವರೆಗೆ ಮಾರಾಟ
ಹೂವಿನ ಕುಡಿಕೆ, ಚಕ್ರ, ಬೊರಸಾ, ಸರಗಳು, ಹೊಸ ಹೊಸ ತರಹದ 7 ಶಾಟ್, 12 ಶಾಟ್, 25 ಶಾಟ್, 50 ಶಾಟ್, 60 ಶಾಟ್, 100 ಶಾಟ್, 120 ಶಾಟ್, 240 ಶಾಟ್, ಸೇರಿದಂತೆ ಇನ್ನೂ ಇತರೆ ರಂಗುರಂಗಿನ ಪಟಾಕಿಗಳು ನಿಮ್ಮ ದಾಸ್ತಾನಿನಲ್ಲಿ ಸಿಗುತ್ತದೆ. ಗಿಫ್ಟ್ 250, 300, 350, 500, 675, 900 ದರದಲ್ಲಿ ದೊರೆಯುತ್ತದೆ.
**ದಿನಾಂಕ 13.11.2020 ರ ವರೆಗೆ ಮಾತ್ರ ಮಾರಾಟ**
ಜನಸಂದಣಿ ತಪ್ಪಿಸಲು ಈ ಬಾರಿ ಎಂ.ಜಿ. ರಸ್ತೆಯ ಅಂಗಡಿ ಜೊತೆಗೆ ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹೋಟೆಲ್ ಹಿಂಭಾಗ ನಮ್ಮ ಗೋಡೌನ್‌ನಲ್ಲೂ ಮಾರಾಟ ಮಾಡಲಾಗುವುದು.
**ಭವಾನಿ ಬುಕ್ ಡಿಪೋ**
**ಕಿರಣ್, ಆಶಾ ಜನರಲ್ ಸ್ಟೋರ್**
ಎಂ.ಜಿ. ರಸ್ತೆ, ದಾವಣಗೆರೆ.
ಕುಂದುವಾಡ ರಸ್ತೆ, ಸಾಯಿ ಇಂಟರ್ ನ್ಯಾಶನಲ್ ಹಿಂಭಾಗ, ದಾವಣಗೆರೆ.
ಫೋನ್ ನಂ.: 9449829236, 9844303551, 9620669555, 9448115270

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.**
ಆವರಗೊಳ್ಳ, ದಾವಣಗೆರೆ-ತಾಲ್ಲೂಕು, ದಾವಣಗೆರೆ ಜಿಲ್ಲೆ
ನಮೂನೆ-12 (ನಿಯಮ 14(3) )
**ಚುನಾವಣಾ ಸೂಚನೆ**
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಆವರಗೊಳ್ಳ, ದಾವಣಗೆರೆ-ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ ಆಡಳಿತ ಮಂಡಲಿಗೆ ದಿನಾಂಕ: 28.11.2020 ರಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ದಾವಣಗೆರೆ ಇವರ ಆದೇಶ ಸಂಖ್ಯೆ: ಡಿಆರ್/ಡಿವಿಜಿ/ ಜಿ.ಚು/ಆ.ಅ/ರಿಆನೇ/ಆಮಂ/19/2020-21 ದಿ: 02.11.2020ರನ್ವಯ ಸಂಘದ ಚುನಾವಣೆಯನ್ನು ದಿನಾಂಕ : 28.11.2020 ರಂದು ಸಂಘದ ಆವರಣದಲ್ಲಿ ಬೆಳಿಗ್ಗೆ 9-00 ಗಂಟೆಯಿಂದ ಸಾಯಂಕಾಲ 04-00 ಗಂಟೆವರೆಗೆ ನಿಗದಿ ಪಡಿಸಿದ್ದು, ಸಂಘದ ನಿರ್ದೇಶಕರುಗಳ ಆಯ್ಕೆಗಾಗಿ ನಡೆಯಲಿರುವ ಚುನಾವಣಾ ವೇಳಾಪಟ್ಟಿ.
ಚುನಾಯಿಸತಕ್ಕ ನಿರ್ದೇಶಕರುಗಳು ಒಟ್ಟು 12 ಸ್ಥಾನಗಳು

| | ಸಾಲಗಾರರ ಕ್ಷೇತ್ರ-11 ಇದರಲ್ಲಿ | |
|---|---|---|
| 1 | ಸಾಮಾನ್ಯ ಸ್ಥಾನ | 05 |
| 2 | ಪರಿಶಿಷ್ಟ ಜಾತಿ ಮೀಸಲು ಸ್ಥಾನ | 01 |
| 3 | ಪರಿಶಿಷ್ಟ ಪಂಗಡ ಮೀಸಲು ಸ್ಥಾನ | 01 |
| 4 | ಹಿಂದುಳಿದ ಪ್ರವರ್ಗ 'ಎ' ಮೀಸಲು ಸ್ಥಾನ | 02 |
| 5 | ಮಹಿಳಾ ಮೀಸಲು ಸ್ಥಾನ | 02 |
| | ಸಾಲಗಾರರಲ್ಲದ ಕ್ಷೇತ್ರ | 01 |
| | ಒಟ್ಟು | 12 |

| | | | | |
|---|---|---|---|---|
| 1 | ಇಚ್ಛೆ ಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಆರಂಭ ದಿನಾಂಕ | ದಿ: 13.11.2020ನೇ ಶುಕ್ರವಾರ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 3-00 ಘಂಟೆವರೆಗೆ | 14 (ಎ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 2 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 20.11.2020 ನೇ ಶುಕ್ರವಾರ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 3-00 ಘಂಟೆಯವರೆಗೆ | | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 3 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | ದಿನಾಂಕ22.11.2020ನೇ ಭಾನುವಾರ ಮಧ್ಯಾಹ್ನ 3-00 ಘಂಟೆಯೊಳಗೆ | 14 (ಸಿ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 4 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ:28.11.2020ನೇ ಶನಿವಾರ ಬೆಳಿಗ್ಗೆ 09-00 ರಿಂದ ಮಧ್ಯಾಹ್ನ 4-00 ಘಂಟೆಯವರೆಗೆ | | ಸಂಘದ ಗೋದಾಮಿನಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ನೇಮಿಸಲ್ಪಟ್ಟ ಸಿಬ್ಬಂದಿ ವರ್ಗದವರಿಂದ |

ಸ್ಥಳ: ಆವರಗೊಳ್ಳ
ದಿನಾಂಕ: 10.11.2020
ಸಹಿ/-
ಸುನೀತ ಹೆಚ್., ರಿಟರ್ನಿಂಗ್ ಅಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಆವರಗೊಳ್ಳ ದಾವಣಗೆರೆ ತಾ. ಹಾಗೂ ಅಧೀಕ್ಷಕರು, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, ದಾವಣಗೆರೆ.

## ಮೆಕ್ಕೆಜೋಳ ವ್ಯಾಪಾರಿ ಮೇಲೆ ಹಲ್ಲೆ, ಸುಲಿಗೆ

ದಾವಣಗೆರೆ, ನ.11- ಮುಂಜಾನೆಯ ವಾಯು ವಿಹಾರದಲ್ಲಿದ್ದ ಮೆಕ್ಕೆಜೋಳದ ವ್ಯಾಪಾರಿಯೋರ್ವರ ಮೇಲೆ ಹಲ್ಲೆ ನಡೆಸಿ ಚಿನ್ನಾಭರಣವನ್ನು ಸುಲಿಗೆ ಮಾಡಿರುವ ಘಟನೆ ನಡೆದಿದೆ.

ಮಾಯಕೊಂಡ ಗ್ರಾಮದ ಛತ್ರಪತಿ (65) ಸುಲಿಗೆಗೊಳಗಾದ ಮೆಕ್ಕೆಜೋಳ ವ್ಯಾಪಾರಿ. ಇಂದು ಬೆಳಗಿನಜಾವ ವಾಯು ವಿಹಾರ ಮಾಡುತ್ತಿದ್ದ ಛತ್ರಪತಿ ಮೇಲೆ ಸುಲಿಗೆಕೋರರು ತಲೆಗೆ ಹೊಡೆದು ಕೊರಳಲ್ಲಿದ್ದ ಸುಮಾರು 75 ಸಾವಿರ ಮೌಲ್ಯದ 30 ಗ್ರಾಂ ಬಂಗಾರದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಸೇತುವೆ ಬಳಿ ಕೆಇಬಿ ಹತ್ತಿರ ತಲೆಗೆ ಪೆಟ್ಟಾಗಿ ರಕ್ತ ಸುರಿಯುತ್ತಾ ಬಿದ್ದಿದ್ದ ಈತನನ್ನು ಕಂಡ ಪೇಪರ್ ಹಾಕುವ ಹುಡುಗನೋರ್ವ ಮನೆಗೆ ಕರೆ ತಂದಿದ್ದಾನೆ ಎಂದು ಛತ್ರಪತಿ ಅವರ ಪತ್ನಿ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಈ ಸಂಬಂಧ ದೂರು ದಾಖಲಿಸಿಕೊಂಡಿರುವ ಮಾಯಕೊಂಡ ಪೊಲೀಸ್ ಠಾಣೆಯ ಎಎಸ್ ಐ ಮಲ್ಲಿಕಾರ್ಜುನ ತನಿಖೆ ಕೈಗೊಂಡಿದ್ದಾರೆ.

## ಜಿಲ್ಲೆಯಲ್ಲಿ 29 ಜನರಿಗೆ ಕೊರೊನಾ ಸೋಂಕು

ದಾವಣಗೆರೆ, ನ.11- ಜಿಲ್ಲೆಯಲ್ಲಿ 29 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡು, 48 ಜನ ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾಗಿ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 12, ಹರಿಹರ 7, ಜಗಳೂರು 1, ಚನ್ನಗಿರಿ 6 ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 3 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ 334 ಸಕ್ರಿಯ ಪ್ರಕರಣಗಳಿವೆ.

# ಕುಟುಂಬದ ಸಮತೋಲನ, ಬೆಳವಣಿಗೆಯಲ್ಲಿ ಹೆಣ್ಣಿನ ಶ್ರಮ ಶ್ಲ್ಯಾಘನೀಯ

### ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಘಟಕದ ಅಂತರ್ಜಾಲದಲ್ಲಿ ಸ್ವರಚಿತ ಭಾವಗೀತೆ ಗಾಯನ ಕಾರ್ಯಕ್ರಮದಲ್ಲಿ ಸಾಹಿತಿ ಪದ್ಮಾ ಶ್ರೀಧರ್

ದಾವಣಗೆರೆ, ನ.11- ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ 65 ನೇ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಅಂತರ್ಜಾಲ ಸ್ವರಚಿತ ಗೀತ ಗಾಯನ ಕಾರ್ಯಕ್ರಮವನ್ನು ನಿನ್ನೆ ನಡೆಸಲಾಯಿತು.

ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ದೇವಿ ಸ್ತುತಿಯನ್ನು ಹಾಡುವುದರ ಮೂಲಕ ಸ್ವಾಗತಿಸಿದರು.

ಹರಿಹರದ ದೊಡ್ಡಮ್ಮ ಎಂದೇ ಹೆಸರಾ ಗಿರುವ ಹಿರಿಯ ಸಾಹಿತಿ ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್ ಅವರು ಕಾರ್ಯಕ್ರಮ ವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಾಹಿತ್ಯಕ್ಕೆ ಸಾವಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಜೀವನದ ಆಚೆ ಇನ್ನೊಂದು ಜವಾಬ್ದಾರಿಯಿದೆ. ಅದು ನಮ್ಮ ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸುವುದು. ಅದನ್ನು ಪ್ರತಿಯೊಬ್ಬರೂ ನಿರ್ವಹಿಸಲೇ ಬೇಕು ಎಂದು ಹಿತ ನುಡಿದರು.

ಕನ್ನಡಕ್ಕೆ ತನ್ನದೇ ಆದ ಸ್ಥಾನಮಾನವಿದ್ದು ದಾಸರು, ಶರಣರು ಹಾಗೂ ಹಿರಿಯ ಕವಿವರೇಣ್ಯರು ಅಷ್ಟೇ ಅಲ್ಲದೇ, ಜಾನಪದ ಕ್ಷೇತ್ರ ಸಾಕಷ್ಟು ಕೊಡುಗೆ ನೀಡಿದೆ. ಇತ್ತೀಚೆಗೆ ವನಿತೆಯರೂ ಸಹ ಕನ್ನಡ ನಾಡು, ನುಡಿ, ಸಂಸ್ಕೃತಿಯ ಉಳಿವಿಗೆ, ಏಳ್ಗೆಗೆ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ದಾವಣಗೆರೆಯ ವನಿತಾ ಸಾಹಿತ್ಯ ವೇದಿಕೆ ಹಾಗೂ ಜಿಲ್ಲಾ ಲೇಖಕಿಯರ ಸಂಘ ನಡೆಸುತ್ತಿರುವ ಕಾರ್ಯಕ್ರಮಗಳೇ ಸಾಕ್ಷಿ ಎಂದು ಲಲಿತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.



ವನಿತಾ ಸಾಹಿತ್ಯ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮ ನಾಗರಾಜ್ ಅವರು ತಮ್ಮ ಆಶಯ ನುಡಿಗಳಲ್ಲಿ, 8 ಜ್ಞಾನಪೀಠಗಳನ್ನು ಪಡೆದ ನಮ್ಮ ಕನ್ನಡ ಭಾಷೆಯು ನಿಜಕ್ಕೂ ಶ್ರೇಷ್ಠ. ಕನ್ನಡ ಸಾಹಿತ್ಯವನ್ನು ತಮ್ಮ ಪದಪುಂಜಗಳಿಂದ ಶ್ರೀಮಂತಗೊಳಿಸಿದ ಕುವೆಂಪು, ಬೇಂದ್ರೆ, ಮಾಸ್ತಿ ಇನ್ನೂ ಹಲವಾರು ಮೇರು ಕವಿಗಳಿಗೆ ಪ್ರಣಾಮಗಳನ್ನು ಸಲ್ಲಿಸಿದರು.

ಮುಖ್ಯ ಅತಿಥಿಯಾಗಿ ಹಿರಿಯ ಸಾಹಿತಿ ಶ್ರೀಮತಿ ಅರುಂಧತಿ ರಮೇಶ್ ಅವರು, ತಮ್ಮ ಮನದ ಮಾತು ಶೀರ್ಷಿಕೆಯಲ್ಲಿ ಹೊರ ದೇಶದ ನೋಟಿನಲ್ಲಿ ಕನ್ನಡದ ಉಲ್ಲೇಖವಿದೆ, ಕನ್ನಡಕ್ಕೆ ಹೆಚ್ಚಿನ ಮಹತ್ವವಿದೆ. ಕನ್ನಡಾಭಿಮಾನ ಮಾತ್ರವಲ್ಲ, ಕನ್ನಡಿಗರ ಸ್ವಾಭಿಮಾನ ಎಚ್ಚರಗೊಳ್ಳಬೇಕು. ಕನ್ನಡಿಗರು ತಮ್ಮ ಕೈಯಿಂದ ಕನ್ನಡ ಸೋರಿ ಹೋಗದಂತೆ ಎಚ್ಚರ ವಹಿಸಬೇಕು. ಕನ್ನಡ ಭಾಷೆ ನಮ್ಮ ರಾಜ್ಯದಲ್ಲಿ ಪ್ರಧಾನವಾಗಿರಬೇಕು. ಯಾವ ಭಾಷೆಗಳು ಎಷ್ಟೇ ಪ್ರಾಮುಖ್ಯತೆ ಪಡೆದರೂ ಕನ್ನಡ ಎಂದಿಗೂ ಮುಂಚೂಣಿಯಲ್ಲಿರಬೇಕು. ಕನ್ನಡದ ದೀಪ ಎಂದಿಗೂ ವಿಶ್ವದೆಲ್ಲೆಡೆ ಬೆಳಗಬೇಕು, ಪ್ರಜ್ವ ಲಿಸಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಮತ್ತೋರ್ವ ಮುಖ್ಯ ಅತಿಥಿ - ಬೆಂಗಳೂರಿನ ಸಿರಿಗನ್ನಡ ವೇದಿಕೆಯ ಮಹಿಳಾ ಘಟಕದ ರಾಜ್ಯ ಸಂಚಾಲಕರಾದ ಶ್ರೀಮತಿ ಪದ್ಮಾ ಶ್ರೀಧರ್ ಅವರು ಮಹಿಳೆ, ಸಮಾಜ ಮತ್ತು ಸಾಹಿತ್ಯ ಎನ್ನುವ ಶೀರ್ಷಿಕೆಯಡಿ ಹೆಣ್ಣು ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದಾಳೆ. ಸಮಾಜದಲ್ಲಿ ಒಂದು ಚಿಕ್ಕ ಘಟಕವೆಂದರೆ ಕುಟುಂಬ.

ಆ ಕುಟುಂಬದ ಸಮತೋಲನ ಮತ್ತು ಸರ್ವತೋಮುಖ ಬೆಳವಣಿಗೆಗೆ ಹೆಣ್ಣಿನ ಶ್ರಮ ಶ್ಲಾಘನೀಯ. ಮಕ್ಕಳಿಗೆ ಸಂಸ್ಕಾರ, ಆಚಾರ ವಿಚಾರಗಳನ್ನು ನೀಡುವುದರ ಮೂಲಕ ಉತ್ತಮ ಸಮಾಜದ ನಿರ್ಮಾಣಕ್ಕೆ ಅಡಿಪಾಯವಾಗಿದ್ದಾಳೆ. ಕನ್ನಡದ ಮೊದಲ ಮಹಿಳಾ ಸಾಹಿತಿ ಅಕ್ಕಮಹಾದೇವಿಯ ವರಿಂದ ಹಿಡಿದು ಇಂದಿನ ಉದಯೋನ್ಮುಖ ಕವಯತ್ರಿಯರೆಲ್ಲರೂ ಸಾಹಿತ್ಯವನ್ನು ಪೋಷಿಸು ವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿ ದ್ದಾರೆಂದು ಅವರಿಗೆ ಅಭಿನಂದಿಸಿದರು.

ಸ್ವರಚಿತ ಗೀತ ಗಾಯನದಲ್ಲಿ ಭಾಗವಹಿಸಿದ ಕಲೇಸಂ ಸದಸ್ಯೆಯರ ಪ್ರತಿಯೊಂದು ಕವಿತೆಗಳನ್ನು ಅತ್ಯಂತ ಭಾವನಾತ್ಮಕವಾಗಿ ಮತ್ತು ಮನೋಜ್ಞವಾಗಿ ಹಿರಿಯ ಸಾಹಿತಿ ಶ್ರೀಮತಿ ಭಾಗ್ಯಲಕ್ಷ್ಮಿ ಸು. ಅಮೃತಾಪುರ ವಿಶ್ಲೇಷಣೆ ಮಾಡಿದರು. ಪ್ರತಿಯೊಂದು ಕವಿತೆಗಳನ್ನು ಆಸ್ವಾದಿಸಿ ಹೆಮ್ಮೆಯಿಂದ ಹರಸಿ ಶುಭ ಕೋರಿದರು.

**ಕಲೇಸಂ ಜಿಲ್ಲಾಧ್ಯಕ್ಷೆ ಶ್ರೀಮತಿ ವೀಣಾ ಕೃಷ್ಣಮೂರ್ತಿ ನೇತೃತ್ವದಲ್ಲಿ ನಡೆದ ಗೀತ ಗಾಯನ ಕಾರ್ಯಕ್ರಮದಲ್ಲಿ ಕನ್ನಡದ ಹಿರಿಮೆ - ಗರಿಮೆಯನ್ನು ಕೊಂಡಾಡಿದ ಕವಯತ್ರಿಯರು.**

ಕರ್ನಾಟಕ ಲೇಖಕಿಯರ ಸಂಘದ 7 ಸದಸ್ಯೆಯರು ಕಾರ್ಯಕ್ರಮದಲ್ಲಿ ಗೀತ ಗಾಯನ ಮಾಡಿ, ಕನ್ನಡದ ಹಿರಿಮೆ - ಗರಿಮೆಯನ್ನು ಕೊಂಡಾಡಿ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಸಫಲರಾದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಹೆಚ್. ಕೆ. ಸತ್ಯಭಾಮ ಮಂಜುನಾಥ್ ವಂದಿಸಿದರು. ಉದಯೋನ್ಮುಖ ಕವಯತ್ರಿಯರಿಗೆ ಹೆಚ್ಚು ಹೆಚ್ಚು ಸಾಹಿತ್ಯದಲ್ಲಿ ತೊಡಗಲು ಪ್ರೇರೇಪಿಸುತ್ತಿರುವ ಶ್ರೀಮತಿ ವೀಣಾ ಕೃಷ್ಣಮೂರ್ತಿ ಅವರ ಶ್ರಮಕ್ಕೆ ಭಾಗ ವಹಿಸಿದ ಎಲ್ಲ ಸಹೃದಯರು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು.

ಹಿರಿಯ ಸಾಹಿತಿ ಶ್ರೀಮತಿ ಭಾಗ್ಯಲಕ್ಷ್ಮಿ ಸು. ಅಮೃತಾಪುರ ಅವರು ಎಲ್ಲಾ ಸ್ವರಚಿತ ಕವನಗಳನ್ನು ಮನೋಜ್ಞವಾಗಿ ವಿಮರ್ಶೆ ಮಾಡಿದರು.

ಶ್ರೀಮತಿ ಸುನಿತಾ ಪ್ರಕಾಶ್, ಶ್ರೀಮತಿ ಗಿರಿಜಾ ಸಿದ್ಧಲಿಂಗಪ್ಪ, ಶ್ರೀಮತಿ ಕೋಮಲ ವಸಂತಕುಮಾರ್, ಶ್ರೀಮತಿ ಡಾ. ರೂಪ ಶಶಿಕಾಂತ್, ಶ್ರೀಮತಿ ಸುನಿತಾ ರಾಜು, ಶ್ರೀಮತಿ ಸೀತಾ ನಾರಾಯಣ್, ಶ್ರೀಮತಿ ಐ.ಕೆ. ಉಮಾದೇವಿ ಅವರುಗಳು ಸ್ವರಚಿತ ಗೀತ ಕವಿಗಳಾಗಿದ್ದಾರೆ.

> ಪ್ರತಿಯೊಬ್ಬರಿಗೂ ತಮ್ಮ ಜೀವನದ ಆಚೆ ಇನ್ನೊಂದು ಜವಾಬ್ದಾರಿಯಿದೆ. ಅದು ನಮ್ಮ ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸುವುದು. ಅದನ್ನು ಪ್ರತಿಯೊಬ್ಬರೂ ನಿರ್ವಹಿಸಲೇಬೇಕು.
> **- ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್**
> ಹಿರಿಯ ಸಾಹಿತಿ, ಹರಿಹರ.

> ಯಾವ ಭಾಷೆಗಳು ಎಷ್ಟೇ ಪ್ರಾಮುಖ್ಯತೆ ಪಡೆದರೂ ಕನ್ನಡ ಎಂದಿಗೂ ಮುಂಚೂಣಿಯಲ್ಲಿರಬೇಕು. ಕನ್ನಡದ ದೀಪ ಎಂದಿಗೂ ವಿಶ್ವದೆಲ್ಲೆಡೆ ಬೆಳಗಬೇಕು, ಪ್ರಜ್ವಲಿಸಬೇಕು.
> **-ಶ್ರೀಮತಿ ಅರುಂಧತಿ ರಮೇಶ್**
> ಹಿರಿಯ ಸಾಹಿತಿ, ದಾವಣಗೆರೆ.

# ಮಹಾವೀರ ಗೋಶಾಲೆಗೆ ಹುಲ್ಲು ದಾನಕ್ಕೆ ಮನವಿ

ದಾವಣಗೆರೆ, ನ. 11- ಸಮೀಪದ ಆವರಗೆರೆಯಲ್ಲಿರುವ ಶ್ರೀ ಭಗವಾನ್ ಮಹಾವೀರ ಗೋಶಾಲೆಯಲ್ಲಿ 650 ಕ್ಕೂ ಹೆಚ್ಚು ದನ-ಕರುಗಳಿವೆ. ಇದರಲ್ಲಿ ಬಹಳಷ್ಟು ದನ-ಕರುಗಳು ಅನಾಥವಾಗಿದ್ದು, ಕಾಯಿಲೆಯಿಂದ ನರಳುತ್ತಿವೆ ಮತ್ತು ಮುದಿಯಾಗಿವೆ.

ಈ ರೀತಿಯ ಹಸುಗಳನ್ನು ಇಲ್ಲಿ ಆರೋಗ್ಯಕರ ವಾತಾವರಣದಲ್ಲಿರಿಸಿ, ಅವುಗಳಿಗೆ ಸಾಕಷ್ಟು ಮೇವು ಒದಗಿಸಿ ಮತ್ತು ಪರಿಣಿತ ವೈದ್ಯರಿಂದ ಶುಶ್ರೂಷೆ ಕೊಡಿಸಲಾಗುತ್ತಿದೆ. ಇದೆಲ್ಲದರ ನಿರ್ವಹಣೆಯನ್ನು ಹಲವಾರು ವರ್ಷಗಳಿಂದ ಗೋಶಾಲೆಯ ಟ್ರಸ್ಟ್ ಮೂಲಕ ನಡೆಸಲಾಗುತ್ತಿದ್ದು, ಕೊರೊನಾ ಸಂಕಷ್ಟ ಕಾಲದಲ್ಲಿ ನಿರ್ವಹಣಾ ವೆಚ್ಚ ಹೆಚ್ಚಾಗಿ ಮತ್ತು ದೇಣಿಗೆ ಬರುವುದು ಕಡಿಮೆಯಾಗಿ ಇಲ್ಲಿರುವ ಗೋವುಗಳು ಸಂಕಷ್ಟದಲ್ಲಿವೆ.



ಈ ಗೋವುಗಳಿಗೆ ಪ್ರಮುಖ ಆಹಾರವಾದ ಹುಲ್ಲನ್ನು ಒದಗಿಸಬೇಕಾಗಿದೆ. ಈಗ ದಾವಣಗೆರೆಯಲ್ಲಿ ಭತ್ತದ ಕಟಾವು ಭರದಿಂದ ನಡೆಯುತ್ತಿದ್ದು, ರೈತರು ತಮ್ಮ ಗದ್ದೆಗಳಲ್ಲಿ ಬೆಳೆದ ಹುಲ್ಲನ್ನು ಈ ಗೋಶಾಲೆಗೆ ದಾನ ಮಾಡಬೇಕೆಂದು ಟ್ರಸ್ಟ್ ಮನವಿ ಮಾಡಿದೆ.

ಸಾರ್ವಜನಿಕರು ತಮ್ಮ ಹುಟ್ಟುಹಬ್ಬ ಅಥವಾ ಯಾವುದೇ ವಿಶೇಷ ಸಂದರ್ಭಕ್ಕೆ ಇಲ್ಲಿನ ಕಛೇರಿಯಲ್ಲಿ ಕನಿಷ್ಟ ರೂ.3000/-ಗಳನ್ನು ದೇಣಿಗೆಯ ರೂಪದಲ್ಲಿ ನೀಡಿದರೆ ಅದರಿಂದ ಒಂದು ಗಾಡಿ ಹಸಿರು ಹುಲ್ಲನ್ನು ಗೋವುಗಳಿಗೆ ನೀಡಬಹುದಾಗಿದೆ. ಸಹೃದಯಿ ರೈತರು ತಮ್ಮ ಗದ್ದೆಗಳಲ್ಲಿ ಬೆಳೆದ ಹುಲ್ಲನ್ನು ನೀಡಬೇಕೆಂದು ಟ್ರಸ್ಟ್ ವಿನಂತಿಸಿದೆ. ವಿವರಗಳಿಗೆ ಜಿತೇಂದ್ರ ಜೈನ್ (9448516033), ದಿನೇಶ್ ಜೈನ್ (9980339333) ಅವರನ್ನು ಸಂಪರ್ಕಿಸಬಹುದು.

## ವಿಕಲಚೇತನರ ಸಭೆ ಇಂದು

ವಿಕಲಚೇತನ ಬಂಧುಗಳ ಸಂಕಲ್ಪ ಸಂಸ್ಥೆಯಿಂದ ಇಂದು ಬೆಳಿಗ್ಗೆ 11 ಕ್ಕೆ ಮಹಾರಾಜ ಪೇಟೆ ಶ್ರೀ ವಿಠ್ಠಲ ಮಂದಿರ ದಲ್ಲಿ ವಿಕಲಚೇತನರ ಸಭೆ ನಡೆಯಲಿದೆ ಎಂದು ಶಶಾಂಕ್ (76766 33025), ಸುರೇಶ್ ತಿಳಿಸಿದ್ದಾರೆ.

## ಸ್ಥಾನಕ್ಕೆ ಚುನಾವಣೆ

(1ನೇ ಪುಟದಿಂದ) ಡಿಸೆಂಬರ್ 1 ರಂದು ನಡೆಯಲಿದ್ದು, ಮತದಾನ ಪೂರ್ಣಗೊಂಡ ನಂತರ ಎಣಿಕೆ ಕಾರ್ಯ ನಡೆದು, ಫಲಿತಾಂಶವು ಅಂದೇ ಪ್ರಕಟಗೊಳ್ಳಲಿದೆ.


॥ ಶ್ರೀ ಸಿದ್ಧರಾಮೇಶ್ವರ ಪ್ರಸನ್ನ ॥
ಇಂದು ಶುಭಾರಂಭ
ವೀ ಪ್ರೈಡ್ ಬೇಕರಿ & ಕೆಫೆ
V PRIDE BAKERY AND CAFE
ನಮ್ಮ ನೂತನ 'ವೀ ಪ್ರೈಡ್ ಬೇಕರಿ ಮತ್ತು ಕೆಫೆ'ಯ ಪ್ರಾರಂಭೋತ್ಸವವನ್ನು ದಿನಾಂಕ 12-11-2020ರ ಗುರುವಾರ ಬೆಳಿಗ್ಗೆ 9.30 ಕ್ಕೆ ಏರ್ಪಡಿಸಿದ್ದೇವೆ. ತಾವುಗಳು ಆಗಮಿಸಿ, ಶುಭ ಹಾರೈಸಬೇಕಾಗಿ ವಿನಂತಿ.
ಸ್ಥಳ : ಸಂಚಾರು ಬಿಲ್ಡಿಂಗ್, ಮೆಡಿಕಲ್ ಬಾಯ್ಸ್ ಹಾಸ್ಟೆಲ್ ರೋಡ್, ದಾವಣಗೆರೆ.
ವಿಶೇಷ ಕುಕೀಗಳು, ಬ್ರೆಡ್‌ಗಳು, ಕೇಕ್‌ಗಳು ಮತ್ತು ಇನ್ನೂ ಅನೇಕ ಖಾದ್ಯಗಳನ್ನು ಸವಿಯಲು ಒಮ್ಮೆ ಭೇಟಿ ನೀಡಿ.
ವಿಶೇಷ ಸಾವಯವ ಜೇನು ತುಪ್ಪ, ರಾಗಿ ಮತ್ತು ಇತರೆ ಅನೇಕ ಆರೋಗ್ಯಕರ ಉತ್ಪನ್ನಗಳೂ ಸಹ ನಮ್ಮಲ್ಲಿ ದೊರೆಯುತ್ತವೆ.
ಸ್ವಾಗತ ಕೋರುವವರು : ವಿಜಯಕುಮಾರ್ ಅಜ್ಜಂಪುರ ಶೆಟ್ರು ಮತ್ತು ಕುಟುಂಬ ವರ್ಗ



॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ॥ ॥ಶ್ರೀ ಬಸವೇಶ್ವರ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ





ಹೊನ್ನಾಳಿ ತಾಲ್ಲೂಕು ಯಕ್ಕನಹಳ್ಳಿ ಗ್ರಾಮದ ವಾಸಿ ದಿ॥ ತಿಮ್ಲಾಪುರದ ಶ್ರೀ ಸಿದ್ದಪ್ಪನವರ (ಮಾಜಿ ಛೇರ್ಮನ್) ಮಕ್ಕಳಾದ ಶ್ರೀ ಟಿ. ಬಸವರಾಜಪ್ಪ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ : 13.10.2020ನೇ ಮಂಗಳವಾರ ಸಂಜೆ 7.45ಕ್ಕೆ ನಮ್ಮ ಮಾತೃಶ್ರೀಯವರಾದ
ಶರಣೆ ತಿಮ್ಲಾಪುರದ ಸಿದ್ದಮ್ಮನವರು
ದಿ॥ ತಿಮ್ಲಾಪುರದ ಶ್ರೀ ಸಿದ್ದಪ್ಪನವರ (ಮಾಜಿ ಛೇರ್ಮನ್) ಧರ್ಮಪತ್ನಿ ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 13.11.2020ನೇ ಶುಕ್ರವಾರ ಬೆಳಿಗ್ಗೆ 10.00ಕ್ಕೆ ಯಕ್ಕನಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು,
✦ ದಿ॥ ಶ್ರೀಮತಿ ಸುಶೀಲಮ್ಮ, ಶ್ರೀ ಟಿ. ಬಸವರಾಜಪ್ಪ, ಸದಸ್ಯರು, ಜಿಲ್ಲಾ ಪಂಚಾಯಿತಿ, ದಾವಣಗೆರೆ.
✦ ಶ್ರೀಮತಿ ಸುನಂದ, ಶ್ರೀ ಟಿ.ಎಸ್. ಮಹೇಶ್ವರಪ್ಪ, ನಿವೃತ್ತ ಕಾರ್ಯನಿರ್ವಹಣಾಧಿಕಾರಿಗಳು, ಭೂಸೇನಾ ನಿಗಮ, ಚಿತ್ರದುರ್ಗ.
✦ ಶ್ರೀಮತಿ ಸುಮ, ಶ್ರೀ ಟಿ. ಚಂದ್ರಪ್ಪ, ಪ್ರಾಧ್ಯಾಪಕರು, ಎಸ್.ಟಿ.ಜೆ.ಐ.ಟಿ, ರಾಣೇಬೆನ್ನೂರು.
✦ ಶ್ರೀಮತಿ ಶಶಿಕಲಾ, ಶ್ರೀ ಟಿ. ಲೋಕೇಶ್ವರಪ್ಪ
✦ ಶ್ರೀಮತಿ ದೀಪಾ, ಶ್ರೀ ಟಿ.ಎಸ್. ಜಗದೀಶ್, ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ದಾವಣಗೆರೆ.
✦ ಶ್ರೀಮತಿ ಯಶೋಧ, ಶ್ರೀ ಟಿ.ಎಸ್. ಯೋಗೇಶಪ್ಪ
✦ ಶ್ರೀಮತಿ ಶಶಿಕಲಾ, ಶ್ರೀ ಟಿ.ಎಸ್. ಅಶೋಕ್, ಸದಸ್ಯರು, ಗ್ರಾಮ ಪಂಚಾಯಿತಿ, ಯಕ್ಕನಹಳ್ಳಿ.
✦ ಶ್ರೀಮತಿ ಗೌರಮ್ಮ, ದಿ॥ ಶ್ರೀ ಹೆಚ್.ಎ. ಉಜ್ಜಿನಪ್ಪ, ಬೆಳ್ಳೂಡಿ.
✦ ಶ್ರೀಮತಿ ಸವಿತಾ, ಶ್ರೀ ಪಾಲಾಕ್ಷಪ್ಪ ಕೋಡಮಗ್ಗಿ, ಅಂಗರಕಟ್ಟೆ.
✦ ಶ್ರೀಮತಿ ಬೆಳ್ಳೂಡೇರ ಲಿಂ॥ ಮುರಿಗೆಪ್ಪನವರ ಮಕ್ಕಳಾದ ಬಿ.ಎಂ. ಮಂಜಪ್ಪ ಮತ್ತು ಸಹೋದರರು, ಯಕ್ಕನಹಳ್ಳಿ ಮತ್ತು ಚಿನ್ನಿಕಟ್ಟೆ, ತಿಮ್ಲಾಪುರದ ವಂಶಸ್ಥರು, ಯಕ್ಕನಹಳ್ಳಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
✦ ಶ್ರೀ ಬಸವೇಶ್ವರ ರೈಸ್‌ಮಿಲ್, ಯಕ್ಕನಹಳ್ಳಿ.
✦ ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್, ಮಲೇಬೆನ್ನೂರು.
✦ ಶ್ರೀ ಆಂಜನೇಯ ಫಿಲ್ಲಿಂಗ್ ಸ್ಟೇಷನ್, ಕುಂದೂರು.
ಫೋ.: 99028 50129, 99720 77518



ambika furniture
ದೀಪಾವಳಿ ಹಬ್ಬದ ಪ್ರಯುಕ್ತ ಭಾರಿ ರಿಯಾಯಿತಿ ಮಾರಾಟ
upto 45% off
0% EMI OFFER
ದಿನಾಂಕ 11-11-2020 ರಿಂದ 14-11-2020 ರ ವರೆಗೆ ಮಾತ್ರ
Heartwood International Design, Affordable Prices
BCL
*T&C Apply
# 843, Mahaveer Tower Building, Near Shanthi Sagar Hotal, Ashok Road, Davangere-577 002.
+91 88844 88092 | 88844 88192
08192 230377 | 231311.
#789/6763, Basaveshwara Complex, 100 Feet main Road, Near Axis Bank, Rajendra Nagar, Simoga-577 204.
+91 88844 88198
08182 401412


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte